ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಜನವರಿ 17, 2022

ಸಂಪುಟ : 48 ಸಂಚಿಕೆ : 247 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




ತರಕಾರಿ ಮಾರುಕಟ್ಟೆ, ಬಾಳೆಕಾಯಿ ಮಂಡಿಗಳು ತೆರೆದಿದ್ದರೂ ಸಹ ಖರೀದಿಸುವ ಗ್ರಾಹಕರ ಸಂಖ್ಯೆ ವಿರಳವಾಗಿತ್ತು.

## ಭಾನುವಾರವೂ ಸಹ ಕರ್ಫ್ಯೂಗೆ ಉತ್ತಮ ಸ್ಪಂದನೆ

ದಾವಣಗೆರೆ, ಜ.16- ವಾರಾಂತ್ಯ ಕರ್ಫ್ಯೂಗೆ ಭಾನುವಾರವೂ ಸಹ ಜನರ ಸ್ಪಂದನೆ ಉತ್ತಮವಾಗಿದ್ದು, ಬಸ್ ಸಂಚಾರ ಎಂದಿನಂತೆ ಇದ್ದರೂ ಕೂಡ ಪ್ರಯಾಣಿಕರ ಸಂಖ್ಯೆ ತುಂಬಾ ವಿರಳವಾಗಿರುವುದು ಕಂಡುಬಂದಿತು.

ತಾಲ್ಲೂಕು ಕಚೇರಿ ಬಳಿ ಇರುವ ತರಕಾರಿ ಮಾರುಕಟ್ಟೆ, ಬಾಳೆಕಾಯಿ ಮಂಡಿಗಳು ತೆರೆದಿದ್ದರೂ ಸಹ ಖರೀದಿಸುವ ಗ್ರಾಹಕರ ಸಂಖ್ಯೆ ತುಂಬಾ ಕಡಿಮೆ ಇತ್ತು.

ನಗರ ದೇವತೆ ಶ್ರೀ ದುರ್ಗಾಂಬಿಕ ದೇವಿ, ಹಳೆಪೇಟೆಯ ಶ್ರೀ ವೀರಭದ್ರೇಶ್ವರ, ಶ್ರೀ ಬೀರಲಿಂಗೇಶ್ವರ ಸೇರಿದಂತೆ ನಗರದ ವಿವಿಧ ಭಾಗಗಳ ದೇವಸ್ಥಾನಗಳು ತೆರೆದಿದ್ದು, ಕೇವಲ ದರ್ಶನಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ತೀರ್ಥ ಪ್ರಸಾದ ವಿನಿಯೋಗವಿರಲಿಲ್ಲ. ಭಕ್ತರು ಸಹ ದರ್ಶನ ಪಡೆದು ತಮ್ಮ ಭಕ್ತಿ ಸಮರ್ಪಿಸಿದರು.

ಪಿ.ಬಿ. ರಸ್ತೆ, ಅಶೋಕ ರಸ್ತೆ, ಜಯದೇವ ವೃತ್ತ, ಎವಿಕೆ ಕಾಲೇಜು ರಸ್ತೆ, ರಾಮ್ ಅಂಡ್ ಕೋ ಸರ್ಕಲ್, ಚರ್ಚ್ ರಸ್ತೆ, ಡೆಂಟಲ್ ಕಾಲೇಜು ರಸ್ತೆ, ಮಾ ಮಾ ಸ್ (2ನೇ ಪುಟಕ್ಕೆ)

# ಶಾಲೆಗಳನ್ನು ಮುಚ್ಚುವುದರಿಂದ ಕೊರೊನಾ ಕಡಿಮೆಯಾಗದು

### ಯಾವುದೇ ಅಲೆಗಾಗಿ ಶಾಲೆ ಮುಚ್ಚುವುದರಲ್ಲಿ ಅರ್ಥವಿಲ್ಲ : ವಿಶ್ವ ಬ್ಯಾಂಕ್

ನವದೆಹಲಿ, ಜ. 16 – ಒಮಿಕ್ರಾನ್ ಕಾರಣಕ್ಕೆ ಮತ್ತು ಯಾವುದೇ ಹೊಸ ಕೊರೊನಾ ಅಲೆ ಬಂತು ಎಂಬ ಕಾರಣಕ್ಕೆ ಶಾಲೆಗಳನ್ನು ಮುಚ್ಚುವುದರಲ್ಲಿ ಯಾವುದೇ ಅರ್ಥವಿಲ್ಲ. ಶಾಲೆ ಮುಚ್ಚುವ ಕ್ರಮವನ್ನು ಕೊನೆಯ ಅಸ್ತ್ರವಾಗಿ ಬಳಸಬೇಕು ಎಂದು ವಿಶ್ವ ಬ್ಯಾಂಕ್ ಜಾಗತಿಕ ಶಿಕ್ಷಣ ನಿರ್ದೇಶಕ ಜೈಮಿ ಸಾವೆದ್ರ ಹೇಳಿದ್ದಾರೆ.

ಕೊರೊನಾ ಕಾರಣದಿಂದಾಗಿ ಶಿಕ್ಷಣದ ಮೇಲೆ ಆಗಿರುವ ಪರಿಣಾಮಗಳ ಅಧ್ಯಯನ ನಡೆಸುತ್ತಿರುವ ಸಾವೆದ್ರ ಅವರ ತಂಡ, ಶಾಲೆಗಳನ್ನು ತೆರೆಯುವುದರಿಂದ ಕೊರೊನಾ ಪ್ರಕರಣಗಳು ಹೆಚ್ಚಾಗುವುದಿಲ್ಲ ಎಂದು ತಿಳಿಸಿದೆ.

ಮಕ್ಕಳು ಲಸಿಕೆ ಪಡೆಯುವವರೆಗೂ ಶಾಲೆಗಳನ್ನು ತೆರೆಯುವುದಿಲ್ಲ ಎಂದು ಹೇಳುವುದಕ್ಕೆ ಯಾವುದೇ ವೈಜ್ಞಾನಿಕ ಕಾರಣಗಳಿಲ್ಲ ಎಂದೂ ಸಾವೆದ್ರ ತಿಳಿಸಿದ್ದಾರೆ.

ಶಾಲೆಗಳನ್ನು ತೆರೆಯುವುದಕ್ಕೂ, ಕೊರೊನಾ ಹರಡುವುದಕ್ಕೂ ಯಾವುದೇ ಸಂಬಂಧವಿಲ್ಲ. ಈಗ ಶಾಲೆಗಳನ್ನು ಮಚ್ಚುವುದಕ್ಕೆ ಯಾವುದೇ ಸಮರ್ಥನೆ ಇಲ್ಲ. ಹೊಸ ಕೊರೊನಾ ಅಲೆಗಳು ಬಂದರೂ ಸಹ, ಕೊನೆ ಹಂತದಲ್ಲಿ



ಮಾತ್ರ ಶಾಲೆ ಮುಚ್ಚಬೇಕು ಎಂದವರು ತಿಳಿಸಿದ್ದಾರೆ.

ರೆಸ್ಟೋರೆಂಟ್, ಬಾರ್ ಹಾಗೂ ಶಾಪಿಂಗ್ ಮಾಲ್‌ಗಳನ್ನು ತೆರೆದಿಟ್ಟು, ಶಾಲೆಗಳನ್ನು ಮುಚ್ಚುವುದರಲ್ಲಿ ಯಾವುದೇ ಅರ್ಥವಿಲ್ಲ. ಇಂತಹ ಕ್ರಮಕ್ಕೆ ಯಾವುದೇ ನೆಪಗಳನ್ನು ನೀಡಬಾರದು ಎಂದವರು ಹೇಳಿದ್ದಾರೆ.

ಶಾಲೆಗಳನ್ನು ತೆರೆಯುವುದರಿಂದ ಮಕ್ಕಳಿಗೆ ಬರುವ ಕೊರೊನಾ ಅಪಾಯ ಅತಿ ಕಡಿಮೆ ಹಾಗೂ ಶಾಲೆಗಳನ್ನು ಮುಚ್ಚುವುದರಿಂದ ಮಕ್ಕಳ ಮೇಲೆ ಆಗುವ ಪರಿಣಾಮ ಅತಿ ಹೆಚ್ಚು ಎಂದು ವಿಶ್ವ ಬ್ಯಾಂಕ್ ನಡೆಸಿದ ಹಲವಾರು ಅಧ್ಯಯನಗಳು ತಿಳಿಸಿವೆ.

2020ರಲ್ಲಿ ನಮಗೆ ಸೋಂಕಿನ ಬಗ್ಗೆ ಹೆಚ್ಚು ತಿಳುವಳಿಕೆ ಇರಲಿಲ್ಲ. ಕೊರೊನಾ ಎದುರಿಸಲು ಯಾವ ಮಾರ್ಗ ಸೂಕ್ತ ಎಂಬುದು ಸ್ಪಷ್ಟವಾಗಿರಲಿಲ್ಲ. ವಿಶ್ವದ ಬಹುತೇಕ ದೇಶಗಳು ಶಾಲೆಗಳನ್ನು ಮುಚ್ಚಿದ್ದವು. ಸಮಯ ಕಳೆದಂತೆ ಕಳೆದ 2 ವರ್ಷಗಳಲ್ಲಿ ನಮಗೆ ಹಲವಾರು ಸಾಕ್ಷಿಗಳು ದೊರೆತಿವೆ. ಹಲವಾರು ಅಲೆಗಳನ್ನು ಕಂಡಿದ್ದೇವೆ ಮತ್ತು ಹಲವಾರು ದೇಶಗಳು ಶಾಲೆಗಳನ್ನು ತೆರೆದಿವೆ ಎಂದವರು ಹೇಳಿದ್ದಾರೆ.

ಶಾಲೆಗಳಲ್ಲಿ ಕೊರೊನಾ ಹರಡುವುದಿಲ್ಲ ಎಂಬುದನ್ನು ಹಲವಾರು ಅಂಕಿ ಅಂಶಗಳು ತೋರಿಸಿವೆ. ಶಾಲೆಗಳನ್ನು ಮುಚ್ಚಿದ ಸಂದರ್ಭದಲ್ಲೂ ಹಲವು ದೇಶಗಳು ಕೊರೊನಾ ಅಲೆಗಳನ್ನು ಕಂಡಿವೆ. ಹೀಗಾಗಿ ಶಾಲೆಗಳಿಂದ ಕೊರೊನಾ ಏರಿಕೆಯಾಗುತ್ತದೆ ಎಂದು ಭಾವಿಸುವುದು ತಪ್ಪು ಎಂದವರು ಹೇಳಿದ್ದಾರೆ.

ಮಕ್ಕಳಿಗೆ ಕೊರೊನಾ ಬಂದರೂ, (2ನೇ ಪುಟಕ್ಕೆ)

## ಕೋವಿಡ್ : 'ಸದ್ಧರ್ಮ ನ್ಯಾಯಪೀಠ'ದ ಕಲಾಪ ಮತ್ತೆ ಮುಂದೂಡಿಕೆ



ಸಿರಿಗೆರೆ, ಜ.16- ಇದೇ ದಿನಾಂಕ 3ರಿಂದ ಪುನರಾರಂಭಗೊಂಡಿದ್ದ 'ಸದ್ಧರ್ಮ ನ್ಯಾಯಪೀಠ'ದ ಕಾರ್ಯಕಲಾಪಗಳನ್ನು ಕೋವಿಡ್ ಕಾರಣದಿಂದ ಮತ್ತೆ ಮುಂದೂಡಲಾಗಿದೆ ಎಂದು ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಕಾರ್ಯದರ್ಶಿಗಳು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಕೋವಿಡ್ ಸೋಂಕಿತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವ ಕಾರಣ ಎಲ್ಲಾ ನ್ಯಾಯಾಲಯಗಳು ಖುದ್ದು ಹಾಜರಾತಿಯನ್ನು ನಿಷೇಧಿಸಿರುತ್ತವೆ. ಆದ ಕಾರಣ ಕಳೆದ ಎರಡು ವಾರಗಳಿಂದ ಪುನರಾರಂಭಗೊಂಡಿದ್ದ ನಮ್ಮ ಮಠದ 'ಸದ್ಧರ್ಮ ನ್ಯಾಯಪೀಠ'ದ ಕಾರ್ಯಕಲಾಪಗಳನ್ನೂ ಸಹ ಅನಿರ್ದಿಷ್ಟ ಕಾಲಾವಧಿಗೆ ಮುಂದೂಡಲಾಗಿದೆ.

ನಾಳೆ ದಿನಾಂಕ 17ರ ಸೋಮವಾರ ನಡೆಯಬೇಕಾಗಿದ್ದ ನ್ಯಾಯಪೀಠದ ಕಾರ್ಯಕಲಾಪಗಳೂ ಸಹ ನಡೆಯುವುದಿಲ್ಲವೆಂದು ತಿಳಿಸಲು ವಿಷಾದಿಸಿದೆ.

## 2020ರ ನಂತರ 1.47 ಲಕ್ಷ ಮಕ್ಕಳಿಗೆ ಪೋಷಕರ ವಿಯೋಗ

ನವದೆಹಲಿ, ಜ. 16 – ಏಪ್ರಿಲ್ 1, 2020ರ ನಂತರ 1,47,492 ಮಕ್ಕಳು ತಂದೆ ಇಲ್ಲವೇ ತಾಯಿ ಇಲ್ಲವೇ ಇಬ್ಬರನ್ನೂ ಕಳೆದುಕೊಂಡಿದ್ದಾರೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ರಕ್ಷಣಾ ಆಯೋಗ ತಿಳಿಸಿದೆ.

ಸ್ವಯಂ ಪ್ರೇರಿತವಾಗಿ ಈ ಬಗ್ಗೆ ಮಾಹಿತಿ ನೀಡಿರುವ ಆಯೋಗ, ಕೊರೊನಾ ಹಾಗೂ ಇತರೆ ಕಾರಣಗಳಿಂದ ಮಕ್ಕಳು ಅನಾಥರಾಗಿದ್ದಾರೆ ಎಂದು ತಿಳಿಸಿದೆ. ರಾಜ್ಯಗಳು ಬಾಲ್ ಸ್ವರಾಜ್ ಪೋರ್ಟಲ್ ಮೂಲಕ ನೀಡಿದ ಮಾಹಿತಿಯನ್ನು ಆಧರಿಸಿ ಈ ವರದಿ ರೂಪಿಸಲಾಗಿದೆ.

ಜನವರಿ 11ರವರೆಗೆ 10,094 ಮಕ್ಕಳು ಅನಾಥರಾಗಿದ್ದಾರೆ. 1,36,910 ಮಕ್ಕಳು ತಂದೆ ಇಲ್ಲವೇ ತಾಯಿಯನ್ನು ಕಳೆದುಕೊಂಡಿದ್ದಾರೆ. 488 ಮಕ್ಕಳು ತೊರೆಯಲ್ಪಟ್ಟಿದ್ದಾರೆ ಎಂದು ಆಯೋಗ ಹೇಳಿದೆ.

ಈ ಮಕ್ಕಳ ಪೈಕಿ 76,508 ಗಂಡು ಹಾಗೂ 70,980 ಹೆಣ್ಣು ಹಾಗೂ (3ನೇ ಪುಟಕ್ಕೆ)

## ಮಲೇಬೆನ್ನೂರು ಬೀರಲಿಂಗೇಶ್ವರ ಕಾಲೇಜಿನ 11 ವಿದ್ಯಾರ್ಥಿನಿಯರಿಗೆ ಸೋಂಕು ದೃಢ

ಮಲೇಬೆನ್ನೂರು, ಜ.16- ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ 15 ವಿದ್ಯಾರ್ಥಿಗಳಿಗೆ ಸೋಂಕು ದೃಢಪಟ್ಟ ಬೆನ್ನಿಂದೆಯೇ ಬೀರಲಿಂಗೇಶ್ವರ ಹೆಣ್ಣು ಮಕ್ಕಳ ಪದವಿ ಪೂರ್ವ ಕಾಲೇಜಿನ 11 ವಿದ್ಯಾರ್ಥಿನಿಯರಿಗೂ ಕೋವಿಡ್ ಟೆಸ್ಟ್ ರಿಪೋರ್ಟ್ ಪಾಸಿಟಿವ್ ಬಂದಿದೆ.

ಸ.ಪ.ಪೂ ಕಾಲೇಜು ಮತ್ತು ಬೀರಲಿಂಗೇಶ್ವರ ಕಾಲೇಜು ಅತಿ ಸಮೀಪದಲ್ಲೇ ಇರುವುದರಿಂದ ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳಿಗೆ ಪಾಸಿಟಿವ್ ಬಂದ ದಿನವೇ ಬೀರಲಿಂಗೇಶ್ವರ ಕಾಲೇಜಿನ 57 ವಿದ್ಯಾರ್ಥಿನಿಯರಿಗೆ ಕೋವಿಡ್ ಟೆಸ್ಟ್ ಮಾಡಲಾಗಿತ್ತು. ಆ ಪೈಕಿ 11 ವಿದ್ಯಾರ್ಥಿನಿಯರಿಗೆ ಸೋಂಕು ಕಾಣಿಸಿಕೊಂಡಿದ್ದು, ಭಾನುವಾರ ಅವರೆಲ್ಲರ ಆರೋಗ್ಯ ತಪಾಸಣೆ ಮಾಡಿಸಿ, ಹೋಂ ಐಸೋಲೇಷನ್‌ಗೆ ಕಳುಹಿಸಲಾಗಿದೆ ಎಂದು ಹೇಳಲಾಗಿದೆ.

ಕಾಲೇಜಿಗೆ ರಜೆ ನೀಡಿರುವ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ಲಭ್ಯವಾಗಿಲ್ಲವಾದರೂ ಸರ್ಕಾರಿ ಕಾಲೇಜಿಗೆ ನೀಡಿರುವ ರಜೆಯಂತೆ ಈ ಕಾಲೇಜಿಗೂ ಒಂದು ವಾರ ರಜೆ ಘೋಷಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ನಾಳೆ ಸೋಮವಾರ ಮತ್ತೊಷ್ಟು ವಿದ್ಯಾರ್ಥಿಗಳಿಗೆ ಕೋವಿಡ್ ಟೆಸ್ಟ್ ಮಾಡಲಾಗುವುದೆಂದು ತಿಳಿದು ಬಂದಿದೆ.

ಎರಡೂ ಕಾಲೇಜಿನ ವಿದ್ಯಾರ್ಥಿಗಳಿಗೆ ಸೋಂಕು ಕಾಣಿಸಿಕೊಂಡಿರುವುದು ಮಲೇಬೆನ್ನೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಜನರಿಗೆ ಶಾಕ್ ನೀಡಿದ್ದು, ಜನ ಇನ್ನಾದರೂ ಜಾಗೃತಿ ವಹಿಸಬೇಕೆಂದು ಉಪ ತಹಶೀಲ್ದಾರ್ ಆರ್.ರವಿ ಮನವಿ ಮಾಡಿದ್ದಾರೆ.

## ಹೊನ್ನಾಳಿ ತಾಲ್ಲೂಕು ಪಂಚಮಸಾಲಿ ಯುವ ಘಟಕಕ್ಕೆ ಹಾಲೇಶ್ ಅಧ್ಯಕ್ಷ

ಹೊನ್ನಾಳಿ, ಜ.16- ತಾಲ್ಲೂಕು ಪಂಚಮಸಾಲಿ ಸಮಾಜದ ಯುವ ಘಟಕದ ಅಧ್ಯಕ್ಷರಾಗಿ ಸಾಯಿ ಆಗ್ರೋದ ಕೆ.ಎನ್. ಹಾಲೇಶ್, ಉಪಾಧ್ಯಕ್ಷರಾಗಿ ಕಮ್ಮಾರಗಟ್ಟೆ ಪ್ರಶಾಂತ್, ಮಾರಿಕೊಪ್ಪ ಪುಟ್ಟನಗೌಡ, ಕೋಟೆಮಲ್ಲೂರು ರಾಜು ಹಿರೇಮಠ ಮೊಬೈಲ್ ಹರೀಶ್ ಆಯ್ಕೆಗೊಂಡಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ಮೃತ್ಯುಂಜಯ ಪಾಟೀಲ್, ಪಟ್ಟಣಶೆಟ್ಟಿ ಪ್ರಭು, ಕಾರ್ಯದರ್ಶಿ ಹೋಟೆಲ್ ಕಾಶಿ, ಕೊಟ್ಟೂರು ನಾಗರಾಜ್ ಆಯ್ಕೆಯಾದರು.

ಸಹ ಕಾರ್ಯದರ್ಶಿ ಮಾರಿಕೊಪ್ಪ ಹರೀಶ, ಜೋಳ ಚನ್ನೇಶ್, ಹೆಚ್‌ಪಿ ವೀರೇಶ್, ಪೇಟೆ ನಿರಂಜನ್, ಮುಕ್ತೇನಹಳ್ಳಿ ಬಸವರಾಜ್, ಹೊಳೆಹರಳಹಳ್ಳಿ ಜಗದೀಶ್, ಪೇಟೆ ವಿಜಯ (2ನೇ ಪುಟಕ್ಕೆ)

## ವಾಲ್ಮೀಕಿ ಜಾತ್ರೆ ಮುಂದೂಡಿಕೆಗೆ ರಾಜನಹಳ್ಳಿ ಶ್ರೀಗೆ ಡಿಸಿ ಮನವಿ

ಮಲೇಬೆನ್ನೂರು, ಜ.16- ರಾಜನ ಹಳ್ಳಿಯ ವಾಲ್ಮೀಕಿ ಗುರುಪೀಠಕ್ಕೆ ಭಾನುವಾರ ಸಂಜೆ ಭೇಟಿ ನೀಡಿದ ಜಿಲ್ಲಾಧಿಕಾರಿ ಮಹಾಂ ತೇಶ್ ಬೀಳಗಿ ಅವರು ಕೊರೊನಾ ಸೋಂಕು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ 4ನೇ ವರ್ಷದ ವಾಲ್ಮೀಕಿ ಜಾತ್ರೆಯನ್ನು ಮುಂದೂಡುವಂತೆ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರಲ್ಲಿ ಮನವಿ ಮಾಡಿದರು.

ಈಗಾಗಲೇ ಹರಜಾತ್ರೆ, ತರಳಬಾಳು ಹುಣ್ಣಿಮೆ ಮತ್ತು ಸಂತ ಸೇವಾಲಾಲ್ ಜಯಂತಿಯನ್ನೂ ಮುಂದೂಡಲಾಗಿದ್ದು, ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲಾ ಕಡೆ ಕೊರೊನಾ ಸೋಂಕು ಅತಿ ವೇಗದಲ್ಲಿ ಹರಡುತ್ತಿರುವುದರಿಂದ ಫೆಬ್ರವರಿ ತಿಂಗಳಲ್ಲಿ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ. ಆದ್ದರಿಂದ ಫೆ. 8 ಮತ್ತು 9 ರಂದು ಹಮ್ಮಿಕೊಂಡಿರುವ 4ನೇ ವರ್ಷದ ವಾಲ್ಮೀಕಿ ಜಾತ್ರೆಯನ್ನು ಮುಂದೂಡಿ, ಕೊರೊನಾ ವಿರುದ್ಧದ ಹೋರಾಟದಲ್ಲಿ ಹಿಂದಿನಂತೆ ಈಗಲೂ ನಮಗೆ ಬೆಂಬಲ ಕೊಡಿ ಎಂದು ಜಿಲ್ಲಾಧಿಕಾರಿ ಬೀಳಗಿ ಅವರು ಸ್ವಾಮೀಜಿ ಅವರಿಗೆ ಕೇಳಿದರು.

ವಾಲ್ಮೀಕಿ ಜಾತ್ರೆಗೆ ರಾಜ್ಯದ ನಾನಾ ಭಾಗಗಳಿಂದ ಲಕ್ಷಾಂತರ ಜನ ಭಾಗವಹಿಸುತ್ತಾರೆ. ಹಾಗಾಗಿ ಜನರ ಆರೋಗ್ಯದ ಹಿತದೃಷ್ಟಿಯಿಂದ ಮತ್ತು ಸರ್ಕಾರದ

**ರಾಜನಹಳ್ಳಿ ಮಠಕ್ಕೆ ಭೇಟಿ ನೀಡಿದ್ದ ಮಹಾಂತೇಶ್ ಬೀಳಗಿ**

ಸೂಚನೆಯಂತೆ ಜಾತ್ರೆಯನ್ನು ಮುಂದೂಡುವ ಬಗ್ಗೆ ಫೆ. 1 ರಂದು ಜಾತ್ರಾ ಸಮಿತಿ ಸಭೆ ನಡೆಸಿ ನಿರ್ಧಾರ ಪ್ರಕಟಿಸುವುದಾಗಿ ಸ್ವಾಮೀಜಿ ಅವರು ಜಿಲ್ಲಾಧಿಕಾರಿ ಅವರಿಗೆ ತಿಳಿಸಿದರು.

ಇದೇ ವೇಳೆ ಮಠದಲ್ಲಿ ಆವರಣದಲ್ಲಿ ಜೋಡಣೆಗೊಳ್ಳುತ್ತಿರುವ ರಿಮೋಟ್ ಕಂಟ್ರೋಲ್‌ನ 6 ಬೃಹತ್ ಗಾಲಿಗಳನ್ನು ಹೊಂದಿರುವ ನೂತನ ತೇರನ್ನು ಜಿಲ್ಲಾಧಿಕಾರಿಗಳು ಪರೀಕ್ಷೆ ಮಾಡಿ, ರಾಜ್ಯದಲ್ಲೇ ಅತಿ ದೊಡ್ಡ ತೇರು ಇದಾಗಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಿರಹಟ್ಟಿ ಮಾಜಿ ಶಾಸಕ ರಾಮಕೃಷ್ಣ ದೊಡ್ಮನಿ, ಅರಣ್ಯ ನಿಗಮದ ಮಾಜಿ ಅಧ್ಯಕ್ಷ ಟಿ.ಈಶ್ವರ್, ಮಠದ ಆಡಳಿತಾಧಿಕಾರಿ ಟಿ.ಓಬಳಪ್ಪ, ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್, ದಾವಣಗೆರೆ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಮಹಾನಗರ ಪಾಲಿಕೆ (4ನೇ ಪುಟಕ್ಕೆ)

## ಖಾಸಗಿ ವಲಯದ ಶೇ.75ರಷ್ಟು ಹುದ್ದೆಗಳು ಸ್ಥಳೀಯರಿಗೆ ಮೀಸಲು

ಚಂಡೀಘಡ, ಜ. 16 – ಹರಿಯಾಣದ ಖಾಸಗಿ ವಲಯದ ಶೇ.75ರಷ್ಟು ಹುದ್ದೆಗಳನ್ನು ಸ್ಥಳೀಯರಿಗೆ ಮೀಸಲಿಡುವ ಕಾಯ್ದೆ ಜಾರಿಗೆ ಬಂದಿದೆ. 30 ಸಾವಿರ ರೂ.ಗಳವರೆಗಿನ ವೇತನದ ಹುದ್ದೆಗಳಿಗೆ ಮೀಸಲಾತಿ ಅನ್ವಯವಾಗಲಿದೆ. ಸರ್ಕಾರದ ಈ ಕ್ರಮದಿಂದ ಹರಿಯಾಣದ ಸಾವಿರಾರು ಜನರಿಗೆ ಉದ್ಯೋಗಾವಕಾಶ ಸಿಗಲಿದೆ ಎಂದು ಉಪ ಮುಖ್ಯಮಂತ್ರಿ ದುಶ್ಯಂತ್ ದಾವೆ ಹೇಳಿದ್ದಾರೆ.

ರಾಜ್ಯದಲ್ಲಿರುವ ಕಂಪನಿಗಳು ತಮ್ಮ ಹುದ್ದೆಗಳ ಬಗ್ಗೆ ಕಾರ್ಮಿಕ ಇಲಾಖೆಯ ಬಳಿ ನಿರಂತರವಾಗಿ ಮಾಹಿತಿ ನೀಡಬೇಕು. ಕಾನೂನು ಉಲ್ಲಂಘನೆ ಶಿಕ್ಷಾರ್ಹ ಅಪರಾಧವಾಗಿದೆ ಎಂದು ದಾವೆ ತಿಳಿಸಿದ್ದಾರೆ.

## ಪಾಕ್ ವಿಜ್ಞಾನಿ ಬಿಡುಗಡೆ ಮಾಡಲು ಒತ್ತೆಯಾಳಾಗಿಟ್ಟುಕೊಂಡವ ಹತ

ಲಂಡನ್, ಜ. 16 – ಅಮೆರಿಕದ ಟೆಕ್ಸಾಸ್ ನಗರದ ಯಹೂದಿ ದೇವಾಲಯದಲ್ಲಿ ನಾಲ್ವರನ್ನು ಒತ್ತೆಯಾಳಾಗಿಟ್ಟುಕೊಂಡಿದ್ದ ಬ್ರಿಟನ್ ನಾಗರಿಕನೋರ್ವನನ್ನು ಭದ್ರತಾ ಸಿಬ್ಬಂದಿ ಹೊಡೆದುರುಳಿಸಿದ್ದಾರೆ.

ಜನರನ್ನು ಒತ್ತೆಯಾಳಾಗಿಟ್ಟುಕೊಂಡಿದ್ದ ವ್ಯಕ್ತಿ, ಜೈಲಿನಲ್ಲಿರುವ ಅಲ್ ಕೈದಾ ಜೊತೆ ಸಂಪರ್ಕ ಹೊಂದಿದ್ದ ಪಾಕಿಸ್ತಾನದ ವಿಜ್ಞಾನಿ ಡಾ. ಆಫಿಯಾ ಸಿದ್ದಿಕಿ ಬಿಡುಗಡೆ ಮಾಡುವಂತೆ ಬೇಡಿಕೆ ಇಟ್ಟಿದ್ದ.

ಆಫಿಯಾ ನನ್ನ ಸಹೋದರಿ ಎಂದು ಒತ್ತೆಯಾಳು ಹೇಳಿದ್ದ ಎಂದು ಸಾಕ್ಷಿಗಳು ತಿಳಿಸಿವೆ. ಆದರೆ, ಜಾನ್ ಫ್ಲಾಯ್ಡ್ ಆಫ್ ದಿ ಕೌನ್ಸಿಲ್ ಆನ್ ಅಮೆರಿಕನ್ - ಇಸ್ಲಾಮಿಕ್ ರಿಲೇಷನ್ಸ್ ಹೇಳಿಕೆ ನೀಡಿದ್ದು, ಆಫಿಯಾ ಸಹೋದರ ಈ ಕೃತ್ಯ ನಡೆಸಿಲ್ಲ ಎಂದು ತಿಳಿಸಿದೆ.

## ಭಾನುವಾರ 2.71 ಲಕ್ಷ ಸೋಂಕಿತರು ಪತ್ತೆ

ನವದೆಹಲಿ, ಜ. 16- ದೇಶದಲ್ಲಿ ಭಾನುವಾರ 2.71 ಲಕ್ಷ ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದೇ ದಿನ ಸೋಂಕಿನಿಂದ 314 ಜನ ಸಾವನ್ನಪ್ಪಿದ್ದಾರೆ. ಪಾಸಿಟಿವ್ ದರ ಶೇ.16.28ಕ್ಕೆ ಹೆಚ್ಚಾಗಿದೆ. ಸಕ್ರಿಯ ಸೋಂಕಿತರ ಸಂಖ್ಯೆ 15.50 ಲಕ್ಷಕ್ಕೆ ತಲುಪಿದೆ.


**ಶಾಮನೂರಿನ ಸೋಗಿ ವೀರಮ್ಮ ಸಿದ್ದವೀರಪ್ಪ ನಿಧನ**



ದಾವಣಗೆರೆ - ಶಾಮನೂರಿನ
**ಶ್ರೀಮತಿ ಸೋಗಿ ವೀರಮ್ಮ ಸಿದ್ದವೀರಪ್ಪ**
ಅವರು, ದಿನಾಂಕ 16.1.2022ರ ಭಾನುವಾರ ರಾತ್ರಿ 8.25 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 90 ವರ್ಷ ವಯಸ್ಸಾಗಿತ್ತು. ವೀರಮ್ಮ, ಸೋಗಿ ತಿಪ್ಪೇಸ್ವಾಮಿ ಅವರ ತಾಯಿ. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.01.2022ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಮೊ : 94484-62773**


## ದುಶ್ಚಟ ಬಿಟ್ಟು ಸನ್ಮಾರ್ಗದತ್ತ ಮುನ್ನಡೆದರೆ ಜೀವನ ಪಾವನ

ರಾಣೇಬೆನ್ನೂರು, ಜ.16- ಜಗತ್ತಿಗೆ ಬೆಳಕು ಚಲ್ಲುವ ಸೂರ್ಯನು ಸಂಕ್ರಾಂತಿಯ ಪರ್ವ ಕಾಲದಲ್ಲಿ ಹೇಗೆ ತನ್ನ ಪಥವನ್ನು ಬದಲಾಯಿಸಿ ಸಮಸ್ತ ಜೀವ ಸಂಕುಲಕ್ಕೆ ಲೇಸು ಬಯಸುತ್ತಾನೆಯೋ ಹಾಗೆಯೇ ಜೀವ ರಾಶಿಗಳಲ್ಲೇ ಅತಿ ಬುದ್ದಿವಂತನಾಗಿರುವ ಈ ಮನುಜನು ಸಹ ತನ್ನ ಅಹಂಕಾರ, ಮದ, ಮತ್ಸರ, ಕ್ರೋಧಗಳ ಜೊತೆಗೆ ಅನೇಕ ದುಶ್ಚಟಗಳನ್ನು ಬಿಟ್ಟು ಸನ್ಮಾರ್ಗದ ಪಥದತ್ತ ಮುನ್ನಡೆದರೆ ಆತನ ಜೀವನ ಬದುಕಿನುದ್ದಕ್ಕೂ ಪಾವನವಾಗುತ್ತದೆ ಎಂದು ಕಾಶಿ ಪೀಠದ ಜಗದ್ಗುರು ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ನಗರದ ಹೊರ ವಲಯದಲ್ಲಿರುವ ಹಿರೇಮಠದ ಶನೈಶ್ಚರಸ್ವಾಮಿ ಮಂದಿರದಲ್ಲಿ ಮಕರ ಸಂಕ್ರಾಂತಿ



ದಿನದಂದು ಶನೈಶ್ಚರಸ್ವಾಮಿಗೆ ವಿಶೇಷ ಅಭಿಷೇಕ ಮತ್ತು ಮಹಾಪೂಜೆ ನೆರವೇರಿಸಿ ಶ್ರೀಗಳು ಆಶೀರ್ವಚನ ನೀಡಿದರು.


ಸೂರ್ಯನು ಮಿಥುನ ರಾಶಿಯನ್ನು ದಾಟಿ ಮಕರ ರಾಶಿಯನ್ನು ಪ್ರವೇಶಿಸುವ ಸಂಧಿಕಾಲದ ಈ ಶುಭ ಕಾಲವನ್ನೇ ಸಂಕ್ರಾಂತಿ ಹಾಗೂ 'ಮಕರ ಸಂಕ್ರಮಣ' ಸಂಕ್ರಾಂತಿಯ ಪರ್ವ ಉತ್ತರಾಯಣ ಪುಣ್ಯಕಾಲ ಎಂದೂ ಸಹ ಬೇರೆ ಬೇರೆ ಭಾಗಗಳಲ್ಲಿ ಕರೆಯುವುದರ ಜೊತೆಗೆ ರೈತ ಸಮುದಾಯದವರು ಹಾಗೂ ಶ್ರೀಸಾಮಾನ್ಯರು ಅಂದು ವಿಶೇಷ ಪೂಜೆ ಮಾಡಿ ಮತ್ತು (2ನೇ ಪುಟಕ್ಕೆ)


**ಪುಣ್ಯಸ್ಮರಣೆ**



32ನೇ ಪುಣ್ಯಸ್ಮರಣೆ
**ದಿ|| ಆರ್. ಶಂಕರ್**
ಫೋರ್‌ಮನ್, ಮುನ್ಸಿಪಾಲಿಟಿ,
ದಾವಣಗೆರೆ. ನಿಧನ: 14.01.1989

ನೀವು ನಮ್ಮನ್ನಗಲಿ
ಹಲವು ವರ್ಷಗಳಾದರೂ
ನಿಮ್ಮ ಸವಿನೆನಪು
ನಮ್ಮ ಹೃದಯದಲ್ಲಿ
ಹಚ್ಚ ಹಸಿರಾಗಿದೆ.
ಸದಾ ನಿಮ್ಮ ಸ್ಮರಣೆಯಲ್ಲಿ,
ನೀವು ಹಾಕಿ ಕೊಟ್ಟ
ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಿದ್ದೇವೆ.



7ನೇ ಪುಣ್ಯಸ್ಮರಣೆ
**ದಿ|| ಆರ್. ಗಣೇಶ್**
ಸಹಾಯಕ ಕಾರ್ಯಪಾಲಕ ಅಭಿಯಂತರರು
ನಿಧನ: 17.01.2015

ಶ್ರೀಮತಿ ನಾಗಮಣಿ ಗಣೇಶ್, ಪೂಜಾ ಪ್ರಕಾಶ್ B.E, MBA, ಪ್ರಕಾಶ್ B.E, MS., USA.
ಪುನೀತ್ ಶಂಕರ್ B.E., PWD, ದಿ. ಹೇಮಂತ್ B.E., ಚಿ. ಕರ್ಣಆದಿತ್ಯ
ನಿರ್ದೇಶಕರು ಕ.ರಾ.ಸ.ನೌ.ಸಂಘ, ಹಾಗೂ ಬಂಧು-ಮಿತ್ರರು.

# ಮುನ್ನಡೆದರೆ ಜೀವನ ಪಾವನ



ರಾಣೇಬೆನ್ನೂರಿನ ಹಿರೇಮಠದ ಶನೈಶ್ಚರಸ್ವಾಮಿ ಮಂದಿರದಲ್ಲಿ ಮಕರ ಸಂಕ್ರಾಂತಿ ದಿನದಂದು ಶನೈಶ್ಚರಸ್ವಾಮಿಗೆ ವಿಶೇಷ ಅಭಿಷೇಕ ಮತ್ತು ಮಹಾಪೂಜೆ.

**(1ನೇ ಪುಟದಿಂದ)** ಸುಗ್ಗಿಯ ಹಬ್ಬವನ್ನಾಗಿ ಆಚರಿಸುವ ಮೂಲಕ ಎಳ್ಳು-ಬೆಲ್ಲ ವಿತರಿಸಿ ಜೀವನ ಉತ್ತಮವಾಗಿರಲಿ ಎಂದು ಒಬ್ಬರಿಗೊಬ್ಬರು ಶುಭ ಹಾರೈಸುವುದು ಸಂಕ್ರಾಂತಿಯ ಸಂಪ್ರದಾಯವಾಗಿದೆ ಎಂದು ಕಾಶಿ ಶ್ರೀಗಳು ಹೇಳಿದರು.

ಶ್ರೀಮಠದ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಶನೈಶ್ಚರಸ್ವಾಮಿಯ ವಾರದ ದಿನವಾದ ಶನಿವಾರ ದಂದೇ ಈ ಬಾರಿ ಮಕರ ಸಂಕ್ರಾಂತಿಯು ಸಹ ಬಂದಿರು ವುದು ಬಹಳಷ್ಟು ಶ್ರೇಷ್ಠವಾಗಿದೆ.

ಸಮಸ್ತ ಮನುಜ ಹಾಗೂ ಜೀವ ಕುಲಕ್ಕೆ ಶನೈಶ್ಚರನು ಒಳಿತನ್ನು ಮಾಡಲಿ, ಸುಖ, ಸಮೃದ್ಧಿ ದಯಪಾಲಿಸಲಿ ಎಂದು ಶ್ರೀಗಳು ಶುಭ ಹಾರೈಸಿದರು.

> ಮನುಷ್ಯನು ತಾನು ಜೀವಿಸಲು ಬದುಕಿನುದ್ದಕ್ಕೂ ಹಣ ಮಾಡುವ ಆಸೆಯೊಂದಿಗೆ ಯಂತ್ರದಂತೆ ದುಡಿದು ಕೊನೆಗೆ ದುಡಿದ ಹಣದಲ್ಲಿ ಜೀವನ ಸವೆಸಲು ಮುಂದಾಗುವುದರೊಳಗಾಗಿ ಆತನ ಆಯುಷ್ಯವೇ ಮುಗಿದು ಹೋಗುತ್ತದೆ ಎಂಬುದನ್ನು ಮನುಷ್ಯನು ತಿಳಿದುಕೊಂಡು ಮುನ್ನಡೆಯಬೇಕು.
>
> **-ಶ್ರೀ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ**
> ಕಾಶಿ ಪೀಠದ ಜಗದ್ಗುರುಗಳು

ಹಾಲೇಶಪ್ಪ ಗೌಳಿ, ಎ.ಎಂ. ಕೊಟ್ರೇಶ್, ಪುನೀತ, ಗುದ್ಲೇಶ್ವರ, ಪರಮೇಶ್ವರ, ಸಚ್ಚಿದಾನಂದ ಶಾಸ್ತ್ರಿಗಳು ಮತ್ತು ಇತರರು ಉಪಸ್ಥಿತರಿದ್ದರು.

# ಕರ್ಫ್ಯೂಗೆ ಉತ್ತಮ ಸ್ಪಂದನೆ

**(1ನೇ ಪುಟದಿಂದ)** ಜಾಯಿಂಟ್ ರಸ್ತೆ, ವಿದ್ಯಾನಗರ, ನೂತನ ಕಾಲೇಜು ರಸ್ತೆ ಸೇರಿದಂತೆ ಬಹುತೇಕ ಕಡೆಗಳಲ್ಲಿ ಕಿರಾಣಿ ಅಂಗಡಿಗಳು, ಬೇಕರಿಗಳು, ಜ್ಯೂಸ್ ಸ್ಟಾಲ್‌ಗಳು, ಮೆಡಿಕಲ್ ಶಾಪ್‌ಗಳು, ನಂದಿನಿ ಹಾಲಿನ ಉತ್ಪನ್ನಗಳ ಮಳಿಗೆ ಗಳು, ಸಣ್ಣ ಪುಟ್ಟ ಚಹಾದಂಗಡಿಗಳು ವ್ಯಾಪಾರ ವಹಿವಾಟು ನಡೆಸಿದವು. ಹೋಟೆಲ್‌ಗಳಲ್ಲಿ ಪಾರ್ಸಲ್ ಸೇವೆ ಎಂದಿನಂತೆ ಮುಂದುವರೆದಿತ್ತು.

ಕಬ್ಬಿಣ ಮತ್ತು ಸಿಮೆಂಟ್, ಎಲೆಕ್ಟ್ರಿಕ್ ಅಂಗಡಿಗಳು ತೆರೆದಿದ್ದು, ವ್ಯಾಪಾರ ಮಾತ್ರ ಮಂದಗತಿಯಲ್ಲಿ ಸಾಗಿತ್ತು.

**ಮಾಂಸದ ಅಂಗಡಿಗಳಿಗೆ ಹೆಚ್ಚಿದ ಬೇಡಿಕೆ:** ನಗರದ ವಿವಿಧ ಭಾಗಗಳಲ್ಲಿ ಮಾಂಸದ ವ್ಯಾಪಾರ ಭರ್ಜರಿಯಾಗಿಯೇ ನಡೆದಿದ್ದು, ಕೆಲವು ಅಂಗಡಿಗಳಲ್ಲಿ ಮಾಂಸ ಖರೀದಿಗಾಗಿ ಜನರು ಮುಗಿಬಿದ್ದಿದ್ದರು. ದಿನದಿಂದ ದಿನಕ್ಕೆ ಕೊರೊನಾ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ದಾಖಲಾಗುತ್ತಿದ್ದರೂ, ಹಳೆ ಭಾಗದಲ್ಲಿ ಮಾತ್ರ ಯಾರೊಬ್ಬರೂ ಕೂಡ ಮಾಸ್ಕ್ ಧರಿಸದೇ, ಸಾಮಾಜಿಕ ಅಂತರ ಕಾಪಾಡದೇ ಜನರು ಓಡಾಡುತ್ತಿರುವುದು ಕಂಡುಬಂತು.

ವಾಹನಗಳ ಸಂಚಾರ ಎಂದಿನಂತೆ ಇತ್ತು. ಈ ಭಾಗದಲ್ಲಿ ಸೆಲೂನ್‌ಗಳು ಸೇರಿದಂತೆ ಎಲ್ಲಾ ರೀತಿಯ ಅಂಗಡಿ ಮುಂಗಟ್ಟುಗಳು ತೆರೆಯಲ್ಪಟ್ಟಿದ್ದವು. ಕೆಲವು ಪ್ರಮುಖ ವೃತ್ತಗಳಲ್ಲಿ ಪೊಲೀಸರು ವಾಹನಗಳ ತಪಾಸಣೆಯಲ್ಲಿ ತೊಡಗಿದ್ದರು.

# ಇಟ್ಟಿಗೆ ಭಟ್ಟಿಯಲ್ಲಿ ಮಕ್ಕಳ ದುಡಿಮೆ



## ಹರಿಹರ : ಕಾನೂನು ಕ್ರಮದ ಎಚ್ಚರಿಕೆ ನೀಡಿದ ಪೌರಾಯುಕ್ತರು

ಹರಿಹರ, ಜ.16- ಹದಿನಾಲ್ಕು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ದುಡಿಸಿಕೊಳ್ಳುತ್ತಿರುವ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಪಟ್ಟ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಪೌರಾಯುಕ್ತರಾದ ಶ್ರೀಮತಿ ಲಕ್ಷ್ಮಿ ಅವರು ಎಚ್ಚರಿಸಿದ್ದಾರೆ.

ಇಟ್ಟಿಗೆ ಭಟ್ಟಿ ಮಾಲೀಕರು, ಕಾರ್ಮಿಕರು, ಪೋಷಕರಿಗೆ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ಕುರಿತು ಮೊನ್ನೆ ಏರ್ಪಾಡಾಗಿದ್ದ ಕಾನೂನು ಅರಿವು-ನೆರವು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.

ಕಾರ್ಮಿಕ, ಕಂದಾಯ, ಸಾರ್ವಜನಿಕ ಶಿಕ್ಷಣ, ಪೊಲೀಸ್ ಇಲಾಖೆಗಳು ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಸ್ಥೆ ಇವರುಗಳ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ತಹಶೀಲ್ದಾರ್ ಶಶಿಧರಯ್ಯ ಉದ್ಘಾಟಿಸಿದರು.

ನಿಷೇಧ ಮತ್ತು ನಿಯಂತ್ರಣ ಕಾಯ್ದೆಯನ್ನು ಉಲ್ಲಂಘಿಸಿ ನೇಮಕ ಮಾಡಿಕೊಂಡಲ್ಲಿ 6 ತಿಂಗಳಿನಿಂದ 2 ವರ್ಷದವರೆಗೆ ಜೈಲು ಶಿಕ್ಷೆ ಅಥವಾ 20 ಸಾವಿರದಿಂದ 50 ಸಾವಿರ ರೂ.ಗಳವರೆಗೆ ದಂಡ ಅಥವಾ ಎರಡಕ್ಕೂ ಒಳಗಾಗಬೇಕಾಗುತ್ತದೆ ಎಂದು ಯೋಜನಾ ನಿರ್ದೇಶಕ ಎನ್. ಪ್ರಸನ್ನ ಎಚ್ಚರಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ ಅವರು ಹರ್ಲಾಪುರ, ಕುರುಬರಹಳ್ಳಿ, ಗುತ್ತೂರು ವ್ಯಾಪ್ತಿಯ ಶಾಲೆ ಬಿಟ್ಟ 63 ಮಕ್ಕಳನ್ನು ಶಾಲೆಗೆ ಮರು ದಾಖಲಿಸಿಕೊಂಡು ಅವರಿಗೆ ನೋಟ್ ಬುಕ್, ಶಾಲಾ ಬ್ಯಾಗ್ ಹಾಗೂ ಇತರೆ ಪಠ್ಯ ಸಾಮಗ್ರಿಗಳನ್ನು ವಿತರಿಸಿದರು.

ಶಿಶು ಅಭಿವೃದ್ಧಿ ಅಧಿಕಾರಿ ನಿರ್ಮಲ, ಪಿಡಿಓ ವಿಜಯಲಕ್ಷ್ಮಿ, ಕಾರ್ಮಿಕ ನಿರೀಕ್ಷಕರಾದ ಕವಿತ ಕುಮಾರಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಜಗದೀಶ್ ಉಜ್ಜಮ್ಮನವರ್, ಇಟ್ಟಂಗಿ ಭಟ್ಟಿಯ ಮಾಲೀಕರು, ಕಾರ್ಮಿಕರು ಹಾಗೂ ಪೋಷಕರು ಹಾಜರಿದ್ದರು.

## ಹರಪನಹಳ್ಳಿಯಲ್ಲಿ ಇಂದು ಬೆಸ್ಕಾಂ ಸಭೆ

ಪಟ್ಟಣದ ಬೆಸ್ಕಾಂ ಉಪವಿಭಾಗೀಯ ಕಚೇರಿಯಲ್ಲಿ ಇಂದು ಮಧ್ಯಾಹ್ನ 3ಕ್ಕೆ ಗ್ರಾಹಕರ ಜೊತೆ ಸಭೆ ಏರ್ಪಡಿಸಲಾಗಿದೆ ಎಂದು ಬೆಸ್ಕಾಂ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಟಿ.ವಿರೂಪಾಕ್ಷಪ್ಪ ತಿಳಿಸಿದ್ದಾರೆ.

## ವಿಕಲಚೇತನರ ಬಸ್‌ಪಾಸ್ ನವೀಕರಣಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜ.16- ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ವಿಕಲಚೇತನರ ರಿಯಾಯಿತಿ ದರದ ಬಸ್ ಪಾಸ್‌ಗಳನ್ನು ನಾಳೆ ದಿನಾಂಕ 17 ರಿಂದ ನವೀಕರಣ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ನವೀಕರಣಕ್ಕೆ ಅರ್ಜಿ ಸಲ್ಲಿಸಲು ಫೆಬ್ರವರಿ 28 ಕೊನೆಯ ದಿನವಾಗಿರುತ್ತದೆ.

ಸಂಬಂಧಪಟ್ಟ ದಾಖಲೆಗಳನ್ನು ಅಂದರೆ ಯುಡಿಐಡಿ ಕಾರ್ಡ್, ಆಧಾರ್, ವಿಕಲಚೇತನರ ಪ್ರಮಾಣಪತ್ರ ಹಾಗೂ ಫೋಟೊ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ಎಂದು ನಿಗಮದ ದಾವಣಗೆರೆ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಿರೇಕಲ್ಮಠ : ಚಂಪಾಗೆ ಶ್ರದ್ಧಾಂಜಲಿ



ಹೊನ್ನಾಳಿ,ಜ.16- ಬಂಡಾಯ ಸಾಹಿತಿ ಪ್ರೊ. ಚಂದ್ರಶೇಖರ ಪಾಟೀಲ ಅವರ ಅಗಲಿಕೆಯಿಂದಾಗಿ ಕನ್ನಡ ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಕಸಾಪ ತಾಲೂಕು ಘಟಕದ ಅಧ್ಯಕ್ಷ ಜಿ. ಮುರಿಗೆಪ್ಪಗೌಡ, ಇಲ್ಲಿನ ಹಿರೇಕಲ್ಮಠದಲ್ಲಿ ಹಮ್ಮಿಕೊಳ್ಳಲಾಗಿದ್ದ ಚಂಪಾ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಹಿರೇಕಲ್ಮಠದ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಸಾಹಿತಿ ಯು.ಎನ್. ಸಂಗನಾಳಮಠ, ಕಸಾಪ ಮಾಜಿ ಅಧ್ಯಕ್ಷ ಕೆ. ರುದ್ರಪ್ಪ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಪಿ. ದೇವೇಂದ್ರಪ್ಪ, ಮಾಜಿ ಅಧ್ಯಕ್ಷೆ ಶಾರದಾ ಕಣಗೊಟಗಿ, ರಂಗಕರ್ಮಿ ಪ್ರೇಮ್‌ಕುಮಾರ್ ಭಂಡಿಗಡ, ಶಿಕ್ಷಕ ಚನ್ನೇಶ್ ಇತರರು ಮಾತನಾಡಿದರು. ಎನ್. ಎಚ್. ಗೋವಿಂದಪ್ಪ, ಪಿ.ಎಂ.ಸಿದ್ಧಯ್ಯ, ಜಿ.ಎಸ್.ಬಸವರಾಜ್, ಕತ್ತಿಗೆ ನಾಗರಾಜ್, ಪ್ರಸನ್ನ, ಬಸವರಾಜ್, ಕೆ. ಶೇಖರಪ್ಪ ಇದ್ದರು.

## ಹೊನ್ನಾಳಿಯಲ್ಲಿ ಇಂದು ಗ್ರಾಹಕರ ಸಭೆ

ಬೆಸ್ಕಾಂ ಹೊನ್ನಾಳಿ ಉಪ ವಿಭಾಗೀಯ ಕಚೇರಿಯ ಆವರಣದಲ್ಲಿ ಇಂದು ಮಧ್ಯಾಹ್ನ 3 ರಿಂದ ಸಂಜೆ 5.30 ರವರೆಗೆ ವಿದ್ಯುತ್ ಗ್ರಾಹಕರ ಸಭೆಯನ್ನು ಏರ್ಪಡಿಸಲಾಗಿದೆ.

# ಶಾಲೆಗಳನ್ನು ಮುಚ್ಚುವುದರಿಂದ ಕೊರೊನಾ ಕಡಿಮೆಯಾಗದು

**(1ನೇ ಪುಟದಿಂದ)** ಗಂಭೀರ ಪರಿಣಾಮ ಆಗುವ ಸಾಧ್ಯತೆ ತೀರಾ ಕಡಿಮೆ ಎಂದಿರುವ ಅವರು, ಯಾವ ದೇಶವೂ ಮಕ್ಕಳಿಗೆ ಲಸಿಕೆ ಬರುವ ತನಕ ಶಾಲೆಗಳನ್ನು ತೆರೆಯುವುದಿಲ್ಲ ಎಂಬ ಷರತ್ತು ವಿಧಿಸಿಲ್ಲ. ಈ ರೀತಿಯ ನಿಲುವಿಗೆ ಯಾವುದೇ ವೈಜ್ಞಾನಿಕ ಆಧಾರವಿಲ್ಲ ಎಂದಿದ್ದಾರೆ.

## ಭಾರತದಲ್ಲಿ ಕಲಿಕಾ ಬಡತನ ಹೆಚ್ಚಳ

ಭಾರತದಲ್ಲಿ ಶಾಲೆಗಳನ್ನು ಮುಚ್ಚುವುದರಿಂದ ಆಗುವ ಪರಿಣಾಮ ಈ ಹಿಂದೆ ಅಂದಾಜಿಸಿದ್ದಕ್ಕಿಂತ ತೀವ್ರವಾಗಿದೆ. ಕಲಿಕೆಯ ಕೊರತೆ ಅತಿ ಹೆಚ್ಚಾಗಿದೆ ಎಂದು ವಿಶ್ವ ಬ್ಯಾಂಕ್ ಜಾಗತಿಕ ಶಿಕ್ಷಣ ನಿರ್ದೇಶಕ ಜೈಮಿ ಸಾವೆದ್ರ ಹೇಳಿದ್ದಾರೆ.

ಭಾರತದಲ್ಲಿ ಕಲಿಕಾ ಬಡತನ ಶೇ.55ರಿಂದ 70ಕ್ಕೆ ಹೆಚ್ಚಾಗುವ ನಿರೀಕ್ಷೆ ಇದೆ. ಹತ್ತು ವರ್ಷವಾದರೂ ಸರಳ ಪದಗಳನ್ನು ಓದಲು ಹಾಗೂ ಅರ್ಥ ಮಾಡಿಕೊಳ್ಳಲು ಬರದೇ ಇರುವುದನ್ನು ಕಲಿಕಾ ಬಡತನ ಎಂದು ಕರೆಯಲಾಗುತ್ತದೆ. ಹೆಚ್ಚು ಮಕ್ಕಳು ಶಾಲೆಯಿಂದ ಹೊರಗುಳಿಯಲಿದ್ದಾರೆ. ಮಕ್ಕಳು ಬಹುತೇಕ ಇಡೀ ಒಂದು ವರ್ಷದ ಕಲಿಕೆಯನ್ನು ಕಳೆದುಕೊಂಡಿದ್ದಾರೆ. ಈ ಮಕ್ಕಳು ಮುಂದಿನ ದಿನಗಳಲ್ಲಿ ತಮ್ಮ ಆದಾಯದ ಶೇ.9ಕ್ಕಿಂತ ಹೆಚ್ಚಿನದನ್ನು ಕಳೆದುಕೊಳ್ಳಲಿದ್ದಾರೆ ಎಂದು ಸಾವೆದ್ರ ಹೇಳಿದ್ದಾರೆ.

ಭಾರತದಂತಹ ದೇಶಗಳಲ್ಲಿ ಕಲಿಕೆಯಲ್ಲಿ ಅಸಮಾನತೆ ಇದೆ. ಕೊರೊನಾಗೆ ಮುಂಚೆಯೂ ಸಮಸ್ಯೆಗಳು ಹೆಚ್ಚಾಗಿದ್ದವು ಹಾಗೂ ಕಲಿಕಾ ಬಡತನ ತೀವ್ರವಾಗಿತ್ತು. ಎರಡು ವರ್ಷಗಳ ನಂತರ ಶಾಲೆಗಳನ್ನು ಮುಚ್ಚುವುದನ್ನು ನೈತಿಕವಾಗಿ ಒಪ್ಪಲಾಗದು. ಕಲಿಕಾ ಬಡತನದಿಂದ ಮಕ್ಕಳ ಮುಂದಿನ ದಿನಗಳ ದುಡಿಮೆಯ ಮೇಲೆ ಅಪಾರ ಪರಿಣಾಮವಾಗುತ್ತದೆ ಎಂದವರು ಎಚ್ಚರಿಸಿದ್ದಾರೆ.

## ಯುವ ಘಟಕಕ್ಕೆ ಹಾಲೇಶ್ ಅಧ್ಯಕ್ಷ



**(1ನೇ ಪುಟದಿಂದ)** ಕುಮಾರ್, ಶಂಕರ್ ಅವರನ್ನು ಆಯ್ಕೆ ಮಾಡಲಾಯಿತು.

ಸದಸ್ಯರಾಗಿ ಬಳ್ಳೇಶ್ವರ ಗಿರೀಶ್, ಹನುಮನಹಳ್ಳಿ ಸಂತೋಷ್, ಹೊಸೂರು ನಾಗರಾಜ್, ಹಿರೇಮಠ ಮೃತ್ಯುಂಜಯ, ಬಳ್ಳೇಶ್ವರ ಸುರೇಶ್, ಭೈರನಹಳ್ಳಿ ಪ್ರಕಾಶ್, ಮಾರಿಕೊಪ್ಪ ಶಿವು, ಸಾಸ್ವೆಹಳ್ಳಿ ಮಲ್ಲಿಕಾರ್ಜುನ, ಹಿರೇಮಠ ಉಳವಿ ನಾಗರಾಜ ಅವರನ್ನು ಆಯ್ಕೆ ಮಾಡಲಾಯಿತು.

ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಲ್ಲಿ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಪಂಚಮಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಬೆನಕನಹಳ್ಳಿ ವೀರಪ್ಪ ಪಟ್ಟಣಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ಗೌರವಾಧ್ಯಕ್ಷ ಡಾ. ರಾಜಕುಮಾರ್, ನಗರ ಘಟಕದ ಅಧ್ಯಕ್ಷ ಗಿರೀಶ್, ಬೆನಕನಹಳ್ಳಿ ಚನ್ನಬಸಣ್ಣ, ಕುಂಕೋದ್ ಹಾಲೇಶ್, ಹಿರೇಮಠ ಬಸವರಾಜಪ್ಪ, ಪಲ್ಲವಿರಾಜು, ಶಿಕ್ಷಕ ದೊಡ್ಡಪ್ಪ, ಅಡಗಿ ಈರಣ್ಣ, ಕಾಯಿ ಬಸಣ್ಣ, ಭಾರತಿ, ಗಮಕಿ ವಿಶ್ವಣ್ಣ, ಪೆಪ್ಸಿ ಪ್ರವೀಣ್ ಇನ್ನಿತರರು ಇದ್ದರು.

## ನಗರದಲ್ಲಿ ಅಪರಿಚಿತ ವೃದ್ಧನ ಸಾವು

ದಾವಣಗೆರೆ, ಜ.16- ಇದೇ ದಿನಾಂಕ 14 ರ ಶುಕ್ರವಾರ ಮಧ್ಯಾಹ್ನ 2.30 ಕ್ಕೆ ಪಿ.ಬಿ. ರಸ್ತೆಯ ಎಸ್‌ಬಿಐ ಬ್ಯಾಂಕಿನ ಬಳಿ ಅಸ್ವಸ್ಥಗೊಂಡಿದ್ದ ಸುಮಾರು 65 ವರ್ಷ ವಯಸ್ಸಿನ ಅಪರಿಚಿತ ವೃದ್ಧನನ್ನು ಚಿಕಿತ್ಸೆಗೆ ಸಿ.ಜಿ. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೆ ಈತ ಇಂದು ಬೆಳಿಗ್ಗೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.

ಮುಖದ ಬಲಭಾಗ ಹಾಗೂ ಎದೆಯ ಎಡಭಾಗದಲ್ಲಿ ಹಳೆಯ ಗಾಯದ ಗುರುತು ಇರುತ್ತದೆ. ತೆಳು ಮೈಕಟ್ಟು, ಕೋಲು ಮುಖ ಹೊಂದಿರುವ ಈತ ಆಕಾಶ ನೀಲಿ ಬಣ್ಣದ ಅಂಗಿ ಮತ್ತು ಬೂದಿ ಬಣ್ಣದ ನೈಟ್ ಪ್ಯಾಂಟ್ ಧರಿಸಿದ್ದಾನೆ. ಈ ವ್ಯಕ್ತಿಗೆ ಸಂಬಂಧಪಟ್ಟವರು ಕೆಟಿಜೆ ನಗರ ಪೊಲೀಸ್ ಠಾಣೆ (08192-259285, 9480803250, 08192-253100)ಯನ್ನು ಸಂಪರ್ಕಿಸಬಹುದು.

## ಅಪರಿಚಿತ ಮಹಿಳೆಯ ಸಾವು

ದಾವಣಗೆರೆ, ಜ.16- ಇದೇ ದಿನಾಂಕ 13 ರ ಗುರುವಾರ ರಾತ್ರಿ 10 ಗಂಟೆಗೆ ಇಎಸ್ಐ ಆಸ್ಪತ್ರೆ ಬಳಿ ಅನಾರೋಗ್ಯದಿಂದ ಬಳಲುತ್ತಿದ್ದ ಸುಮಾರು 60 ವರ್ಷ ವಯಸ್ಸಿನ ಅಪರಿಚಿತ ಮಹಿಳೆಯನ್ನು ಚಿಕಿತ್ಸೆಗೆ ಸಿ.ಜಿ. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈಕೆ ಇಂದು ಬೆಳಿಗ್ಗೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ.

ಹಣೆಯ ಮೇಲೆ ಮತ್ತು ಗದ್ದದ ಮೇಲೆ ಹಚ್ಚೆ ಗುರುತು ಇದೆ. ತೆಳು ಮೈಕಟ್ಟು, ದುಂಡು ಮುಖ ಹೊಂದಿದ್ದು, ಕೆಂಪು ಬಣ್ಣದ ನೈಟಿ ಧರಿಸಿದ್ದಾಳೆ. ಈ ಮಹಿಳೆಗೆ ಸಂಬಂಧಪಟ್ಟವರು ಕೆಟಿಜೆ ನಗರ ಪೊಲೀಸ್ ಠಾಣೆ (08192-259285, 9480803250, 08192-253100)ಯನ್ನು ಸಂಪರ್ಕಿಸಬಹುದು.


**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಸೈಟುಗಳು ಮಾರಾಟಕ್ಕಿವೆ**
ಬಾಲಾಜಿ ಲೇಔಟ್‌ನಲ್ಲಿ 30x50 ಉತ್ತರ. ನಿಜಲಿಂಗಪ್ಪ ಬಡಾವಣೆಯಲ್ಲಿ 30x35 ಪಶ್ಚಿಮ. ಬಸವೇಶ್ವರ ಬಡಾವಣೆಯಲ್ಲಿ 30x40 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
ಮೊ.97421 44715

**ಮನೆ ಮಾರಾಟಕ್ಕಿದೆ**
ದಾವಣಗೆರೆ SPS ನಗರದ ಬೂದಾಳ್ ರಸ್ತೆ, 1ನೇ ಹಂತದಲ್ಲಿ ಡೋರ್ ನಂ. ವುಳ್ಳ 20x30 ರಲ್ಲಿ ಕಟ್ಟಿರುವ ಎರಡು ಅಂತಸ್ತಿನ ಮನೆ ಮಾರಾಟಕ್ಕಿದೆ. ಆಸಕ್ತರು ವಿಚಾರಿಸಿ.
ಮೊ. 82175-93711

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಆಸಕ್ತರು ಬಯೋಡಾಟಾ ಹಾಗೂ ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166
ಆಕರ್ಷಕ ವೇತನ ನೀಡಲಾಗುವುದು.

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

**HOUSE FOR RENT**
1st Floor, 2 BHK West Face, Door No. 2491, MCC `A' Block, 9th Cross, Davangere.
Contact :
94482 33494

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡಲು PUC Pass or Fail ಯುವಕರು & ಯುವತಿಯರು ಹಾಗೂ ಬಿಲ್ಲಿಂಗ್ ಸೆಕ್ಷನ್‌ನಲ್ಲಿ ಅನುಭವವುಳ್ಳವರು ಸಂಪರ್ಕಿಸಿ.
ಕಾಳಿಕಾದೇವಿ ಸರ್ಕಲ್, ಹೈಟೆಕ್ ಹಾಸ್ಪಿಟಲ್ ರೋಡ್, ದಾವಣಗೆರೆ.
98441 07062

**ಬೇಕಾಗಿದ್ದಾರೆ**
ಬಿಲ್ಡಿಂಗ್‌ನಲ್ಲಿ ಎಲೆಕ್ಟ್ರಿಕಲ್ / ವೈರಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ. ಆಸಕ್ತರು ಸಂಪರ್ಕಿಸಿ.
99167 01303

**ಕುರಿಗಳು ಮಾರಾಟಕ್ಕಿವೆ**
ಶ್ರೀ -ಮಾರುತಿ ಕುರಿ ಸಾಕಾಣಿಕೆ ಕೇಂದ್ರ
ನಮ್ಮಲ್ಲಿ ಉತ್ತಮವಾಗಿ ಸಾಕಿದ ಆರೋಗ್ಯಕರ ನಾಟಿ ಟಗರುಗಳು ಸಿಗುತ್ತವೆ. ದಾವಣಗೆರೆಯಿಂದ ಕೇವಲ 4 ಕಿ.ಮೀ
70196 02944
94807 46013

**ಮನೆ ಬಾಡಿಗೆಗೆ ಇದೆ**
(2 BHK)
ಎಸ್.ಎಸ್. ಬಡಾವಣೆ, 4ನೇ ಮೇನ್, 7ನೇ ಕ್ರಾಸ್, #5684/5 ಸತೀಶ್ ಕೃಪ, ದಾವಣಗೆರೆ.
ಫೋ. : 97310 62276
86608 34592

**ಹುಡುಗರು ಬೇಕಾಗಿದ್ದಾರೆ**
ಅಂಗಡಿ ಕೆಲಸಕ್ಕೆ
ದಾವಣಗೆರೆ
94480 38223

**ಹೊಸಮನೆ ಮಾರಾಟಕ್ಕಿದೆ**
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ ಗ್ರೀನ್ ಬಿಲ್ಡ್ ಇಂಜಿನಿಯರ್ಸ್ ಅಂಡ್ ಡೆವಲಪರ್ಸ್ ನಿರ್ಮಿಸಿರುವ ಉತ್ತರ ದಿಕ್ಕಿನ 20×30 ಅಳತೆಯ ಹೊಸಮನೆ ಮಾರಾಟಕ್ಕಿದೆ. ವಾಸ್ತು ಪ್ರಕಾರ ಗ್ರೌಂಡ್ ಮತ್ತು ಫಸ್ಟ್ ಫ್ಲೋರ್ ಪ್ರತ್ಯೇಕ ಇರುವ, ಫರ್ನಿಷ್ಡ್ ಎರಡು ಬೆಡ್ ರೂಮ್ ಮತ್ತು ಸ್ವಂತ ಬೋರ್ ವೆಲ್ ಹೊಂದಿರುವ ಮನೆ.
ಸಂಪರ್ಕಿಸಿ - 63601 09142

**ಬೇಕಾಗಿದ್ದಾರೆ**
ಹರಿಹರದ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
(ದ್ವಿಚಕ್ರ ವಾಹನ ಹೊಂದಿರಬೇಕು)
(ಆಕರ್ಷಕ ವೇತನ ನೀಡಲಾಗುವುದು)
7018588900, 9538870257

**REQUIRED**
B.Com. graduate with Computer Tally knowledge to Auditor's Office.
Contact Between :
10-30 am to 6-00 pm
08912-232918

**20x40 ಕೆಳಗೆ+ಮೇಲೆ ಮನೆ ಲೀಸ್‌ಗೆ ಇದೆ**
ನಲ್ಲಿ ಮತ್ತು ಬೋರ್ ನೀರಿನ ಸೌಕರ್ಯವಿದೆ. KSRTC ಬಸ್‌ಸ್ಟ್ಯಾಂಡ್ ಹಿಂಭಾಗ, ಭಗತ್‌ಸಿಂಗ್ ನಗರ, ದಾವಣಗೆರೆ
(M) : 97439 68557
(M) : 98866 63948

**ಮಾರಾಟ/ಭೋಗ್ಯಕ್ಕೆ**
30x40 ಅಡಿ ಅಳತೆಯುಳ್ಳ 2 ಅಂತಸ್ತಿನ ಕಟ್ಟಡ ಹೈಟೆಕ್ ಆಸ್ಪತ್ರೆ ರಸ್ತೆಯಲ್ಲಿ ಜಯನಗರದ ಯೋಗಿ ರೆಡ್ಡಿ ಕಟ್ಟಡದ ಹತ್ತಿರ ತುರ್ತಾಗಿ ಮಾರಾಟಕ್ಕಿದೆ. ಬೋರ್, ಮುನ್ಸಿಪಲ್ ವಾಟರ್, ಕಾರ್ ಪಾರ್ಕಿಂಗ್ ವ್ಯವಸ್ಥೆ ಇದೆ. ಆಸಕ್ತರು ಸಂಪರ್ಕಿಸಿ
86187 39278 (ಉಮಾದೇವಿ)

**ADMISSION OPEN FOR 2021-22**
DMLT, DMIT, DOT & AT DOT, DDT, DHI, D.Pharma
(Last Date 20-1-2022)
ಕೆಲವೇ ಸೀಟುಗಳು ಮಾತ್ರ ಹಾಸ್ಟೆಲ್ ಸೌಲಭ್ಯವಿದೆ.
V.S. PARAMEDICAL COLLEGE
Near Ram & Co Circle, Davangere.
85532 78258

**ಸೇಲ್ಸ್ ಬಾಯ್ಸ್ / ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.**
ಬಟ್ಟೆ ಅಂಗಡಿಯಲ್ಲಿ ಅನುಭವವುಳ್ಳವರಿಗೆ ಆದ್ಯತೆ.
ಮಾರುತಿ ಟೆಕ್ಸ್‌ಟೈಲ್ಸ್
ಮಾರುತಿ ಗಾರ್ಮೆಂಟ್ಸ್
ವಿದ್ಯಾರ್ಥಿ ಭವನ, ಹದಡಿ ರಸ್ತೆ, ದಾವಣಗೆರೆ.
76764 19329
98448 60666
86608 55868

**REQUIRED TELECALLERS**
Contact : 96066 92888
96066 91888
82963 76716
Location : Davangere

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮನೆ ಮಾರಾಟಕ್ಕೆ ಇದೆ**
ದಾವಣಗೆರೆ ಕೆ.ಬಿ. ಬಡಾವಣೆ ಜಾಧವ್ ಆಸ್ಪತ್ರೆ ಸಮೀಪ, 5ನೇ ಕ್ರಾಸ್‌ನಲ್ಲಿ 54x44 ಅಳತೆಯ ಉತ್ತರ-ಪಶ್ಚಿಮ ಕಾರ್ನರ್ ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
99642 29447
74066 95424

**ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
9591497776

**Walk In Interviews**
* Lecturers BE/M.Tech Electronics & Communication Mechanical Electrical & Electronics
* Physics Msc.,
Samruddhi Coaching Academy
6364640296

**ಮನೆ ಬಾಡಿಗೆಗೆ ಇದೆ**
5 ಬೆಡ್‌ರೂಂವುಳ್ಳ 40x60 ವಿಸ್ತೀರ್ಣವುಳ್ಳ ಮನೆ ಹೆಸರು : ಸ್ಪಂದನ ಬಾಡಿಗೆಗೆ ಇದೆ. ವಿಳಾಸ : ಎಸ್.ಎಸ್. ಬಡಾವಣೆ, ಬಿ ಬ್ಲಾಕ್, 8ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, ದಾವಣಗೆರೆ.
98803 09616, 89515 61754

**ಬಾಡಿಗೆಗೆ ಇದೆ**
ಹದಡಿ ರಸ್ತೆಯಲ್ಲಿರುವ ಎಂ.ಎಂ. ಫಾರ್ಮಾಲಿಂಕ್ಸ್‌ನ ಬಿಲ್ಡಿಂಗ್‌ನಲ್ಲಿ ಫಸ್ಟ್ ಫ್ಲೋರ್ 23x75 ಅಳತೆಯ ಮಳಿಗೆ ಬಾಡಿಗೆಗೆ ಇದೆ.
ವಿಳಾಸ : M.M. Pharmalinks, #491/3C, Hadadi Road, Davangere.
78991 77660

**TEACHERS WANTED**
We look for trained and untrained teachers with fluency in English for the following subject. English, Maths, Science, Social, Hindi, Kannada, Computer Science
Sri Gurukula CBSE Residential School
Lokikere Road, Thuruchagatta Village, Davangere.
7338604512, 73386 04513

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



**ಸವಿತಾ ಸಮಾಜದ ಲಚ್ಚಮಾರಿ ಜಯಲಕ್ಷ್ಮಿ ನಿಧನ**




ದಾವಣಗೆರೆ ಸಿಟಿ ನಿಟ್ಟುವಳ್ಳಿ ಸೈಯದ್ ಪೀರ್ ಬಡಾವಣೆ ವಾಸಿ ಅರಿಕೇರಿ ರಾಜು ಅವರ ಪತ್ನಿ ಲಚ್ಚಮಾರಿ ಜಯಲಕ್ಷ್ಮಿ (40) ಇವರು, ದಿನಾಂಕ 16-1-2022 ರ ಭಾನುವಾರ ಸಂಜೆ 6 ಗಂಟೆಗೆ ನಿಧನರಾದರು. ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 17-1-2022 ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಬೂದಾಳ್ ರಸ್ತೆಯಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

**ಬಿ.ಎನ್. ಚಂದ್ರಶೇಖರ್ ಬಸ್ತಿಪಾಡ್ ನಿಧನ**



ದಾವಣಗೆರೆ ಸಿಟಿ ವಿಜಯನಗರ ಬಡಾವಣೆ 6ನೇ ಕ್ರಾಸ್ ವಾಸಿ ಸವಿತಾ ಸಮಾಜದ ಮುಖಂಡರಾದ ಬಿ.ಎನ್. ಚಂದ್ರಶೇಖರ್ ಬಸ್ತಿಪಾಡ್ (50) ಅವರು, ದಿನಾಂಕ 16-1-2022 ರ ಭಾನುವಾರ ಮಧ್ಯಾಹ್ನ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17-1-2022 ರ ಸೋಮವಾರ ಮಧ್ಯಾಹ್ನ 12ಕ್ಕೆ ನಗರದ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ.

**ಕೆ.ಬೇವಿನಹಳ್ಳಿಯ ಗಂಗನರಸಿ ಬಸವರಾಜಪ್ಪ ನಿಧನ**



ಹರಿಹರ ತಾಲ್ಲೂಕು ಕೆ. ಬೇವಿನಹಳ್ಳಿ ಗ್ರಾಮದ ವಾಸಿ ಗಂಗನರಸಿ ಬಸವರಾಜಪ್ಪ (83) ಅವರು ದಿನಾಂಕ 16.1.2022ರ ಭಾನುವಾರ ಸಂಜೆ 7.17 ಕ್ಕೆ ನಿಧನರಾದರು. ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17.1.2022 ರ ಸೋಮವಾರ ಮಧ್ಯಾಹ್ನ 12.30 ಕ್ಕೆ ಕೆ. ಬೇವಿನಹಳ್ಳಿಯಲ್ಲಿ ನೆರವೇರುವುದು.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 08.01.2022ರಂದು ನಿಧನರಾದ
ದಾವಣಗೆರೆ ವಿನೋಬನಗರ
ಶ್ರೀ ಶಂಭುಲಿಂಗೇಶ್ವರ ದೇವಸ್ಥಾನ
ಅಭಿವೃದ್ಧಿ ಸಮಿತಿಯ ಕಾರ್ಯದರ್ಶಿಗಳಾದ
**ಶ್ರೀ ಎನ್.ಎಂ.ಕಾಡಯ್ಯನಮಠ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಹೆಚ್.ಟಿ. ನಾಗೇಂದ್ರಪ್ಪ, ಗೌರವಾಧ್ಯಕ್ಷರು
- ಶ್ರೀಮತಿ ಸಂಗಮ್ಮ, ಉಪಾಧ್ಯಕ್ಷರು
- ಬಿ.ಆರ್.ಮಂಜುನಾಥ, ಉಪಾಧ್ಯಕ್ಷರು
- ಬಾದಾಮಿ ಚನ್ನಬಸಪ್ಪ, ಖಜಾಂಚಿ
- ಕೆ. ಕರಿಬಸಪ್ಪ (ಪಾಪಣ್ಣ), ಸದಸ್ಯರು
- ವಿಘ್ನೇಶ್ ಎನ್. ಹದಡಿ, ಸದಸ್ಯರು
- ಎ. ಬಸವರಾಜ್ ಕೊಂಡಜ್ಜಿ, ವ್ಯವಸ್ಥಾಪಕರು
- ಕೆ.ಜಿ. ಮಹಾದೇವಪ್ಪ, ಅಧ್ಯಕ್ಷರು
- ಡಾ. ಎನ್. ಅರುಣಾಚಲ ರೇವಣಕರ್, ನಿ.ಪೂ.ಅಧ್ಯಕ್ಷರು
- ಸುರೇಶ್ ಎನ್. ಶೇಟ್, ಜಂಟಿ ಕಾರ್ಯದರ್ಶಿ
- ಜನಾರ್ಧನ್ ಕೆ.ಎಸ್. ಸದಸ್ಯರು
- ಅಂದನೂರು ಮುರುಗೇಶಪ್ಪ, ಸದಸ್ಯರು
- ಎಸ್.ಎಂ.ಜೆ.ಶಿವಕುಮಾರಸ್ವಾಮಿ, ಸದಸ್ಯರು
- ಎಸ್.ಎಂ.ರೇವಣಸಿದ್ದಯ್ಯ ಶಾಸ್ತ್ರಿಗಳು, ಅರ್ಚಕರು

**ಶ್ರೀ ಶಂಭುಲಿಂಗೇಶ್ವರ ದೇವಸ್ಥಾನ ಅಭಿವೃದ್ಧಿ ಸಮಿತಿ**
1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಹತ್ತಿರ, ವಿನೋಬನಗರ, ದಾವಣಗೆರೆ - 6.

**ಕೆ. ಬಾಲರಾಜು ನಿಧನ**



ದಾವಣಗೆರೆ ದೇವರಾಜ ಅರಸು ಬಡಾವಣೆ 4ನೇ ಕ್ರಾಸ್ 'ಬಿ' ಬ್ಲಾಕ್ ವಾಸಿ **ಅಕ್ಕಸಾಲಿಗರ ಕೃಷ್ಣಪ್ಪ ಶೇಟ್** ಇವರ ಹಿರಿಯ ಪುತ್ರ ಹಾಗೂ ಬಾಲಮಂದಿರದ ನಿವೃತ್ತ ಅಧೀಕ್ಷಕರಾದ
**ಕೆ. ಬಾಲರಾಜು**
ಇವರು ದಿನಾಂಕ 16-01-2022 ರ ಭಾನುವಾರ ಮಧ್ಯಾಹ್ನ 3.05 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17-01-2022 ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.
— ದುಃಖತಪ್ತ ಕುಟುಂಬ ವರ್ಗ —
**ಶ್ರೀಮತಿ ಶಾಮಲಾ ಬಾಲರಾಜು ಮತ್ತು ಮಕ್ಕಳು, ಸಹೋದರ ನಾಗರಾಜ್ ಕೆ. ಹಾಗೂ ಸಹೋದರಿಯರು.**
ಮೊ. 88924-54977, 98804-48446

**ಜಿ.ಬಿ. ಸುರೇಶ್ ನಿಧನ**



ದಾವಣಗೆರೆ ಬನಶಂಕರಿ ಬಡಾವಣೆಯ ವಾಸಿ
**ಶ್ರೀ ಜಿ.ಬಿ. ಸುರೇಶ್**
ಅವರು ದಿನಾಂಕ 16.01.2022ರ ಭಾನುವಾರ ತಡ ರಾತ್ರಿ 1.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 58 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.1.2022ರ ಸೋಮವಾರ ಮಧ್ಯಾಹ್ನ 1.30ಕ್ಕೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
-ದುಃಖತಪ್ತ ಕುಟುಂಬ ವರ್ಗ
98809-96212, 80501-07140

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female Freshers/Experienced
98444 92888

# ಸಾಹಿತಿಯನ್ನಾಗಿಸಿದ ಲಾಕ್‌ಡೌನ್ : ಹೆಚ್.ಎನ್. ಶಿವಕುಮಾರ್ ಚೊಚ್ಚಲ ಕೃತಿ ಬಿಡುಗಡೆ

ದಾವಣಗೆರೆ, ಜ. 16- ಇಂಜಿನಿಯರಿಂಗ್ ಪದವೀಧರರಾಗಿರುವ ಹೆಚ್.ಎನ್. ಶಿವಕುಮಾರ್ ಅವರು ವೃತ್ತಿಯಲ್ಲಿ ಗುತ್ತಿಗೆದಾರರಾಗಿದ್ದು, ಪ್ರವೃತ್ತಿಯನ್ನಾಗಿಸಿಕೊಂಡು ರಚಿಸಿದ ಕವನಗಳ ಸಂಗ್ರಹ 'ಮುಂಗಾರು' ಕವನ ಸಂಕಲನ ಸಾಹಿತ್ಯ ಲೋಕಕ್ಕೆ ಸಮರ್ಪಿತಗೊಂಡಿದೆ.

ನಗರದ ಕುವೆಂಪು ಕನ್ನಡ ಭವನದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಸರಳ ಸಮಾರಂಭದಲ್ಲಿ ವಿಶ್ರಾಂತ ಪ್ರಾಂಶುಪಾಲರಾಗಿರುವ ಹಿರಿಯ ಸಾಹಿತಿ ಪ್ರೊ. ಹೆಚ್.ಎ. ಭಿಕ್ಷಾವರ್ತಿಮಠ ಅವರು 'ಮುಂಗಾರು' ಸಂಕಲನವನ್ನು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಆಶಯ ನುಡಿಗಳನ್ನಾಡಿದ ಭಿಕ್ಷಾವರ್ತಿಮಠ, ಸಾಹಿತ್ಯ ರಚನೆಗೆ ಕೈಹಾಕಿ ಕೇವಲ ಒಂದೂವರೆ ವರ್ಷದಲ್ಲಿ ಈ ಕ್ಷೇತ್ರಕ್ಕೆ ತಮ್ಮ ಚೊಚ್ಚಲ ಕವನ ಸಂಕಲನ ಕೊಟ್ಟಿರುವ ಹೆಚ್.ಎನ್. ಶಿವಕುಮಾರ್ ಅವರಿಂದ ಇನ್ನೂ ಹೆಚ್ಚಿನ ಕೃತಿಗಳು ಹೊರ ಹೊಮ್ಮಲಿ ಎಂದು ಹಾರೈಸಿದರು.

'ಮುಂಗಾರು' ಕವನ ಸಂಕಲನ ಕುರಿತಂತೆ ಮಾತನಾಡಿದ ಶ್ರೀ ರಾಘವೇಂದ್ರ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಬಸವರಾಜ ಹನುಮಲಿ ಅವರು, ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಹೆಚ್.ಎನ್. ಶಿವಕುಮಾರ್, ಕ್ರಿಯಾಶೀಲ ವ್ಯಕ್ತಿತ್ವ ಹೊಂದಿದ್ದು, ಇದೀಗ ಅವರ ಕವನ ಸಂಕಲನ ಬಿಡುಗಡೆಯಾಗುವುದರ ಮೂಲಕ ಅವರಲ್ಲಿರುವ ಬಹುಮುಖ ಪ್ರತಿಭೆ ಅನಾವರಣಗೊಂಡಿದೆ ಎಂದು ಶ್ಲಾಘಿಸಿದರು.

ಕವಿತೆ ಎಂದರೆ ಮನದಾಳದ ನೋವು, ನಲಿವಿಗೆ ಕೈ ಹಿಡಿಯುವ ಸಂಗಾತಿ. ಸಂತೋಷ - ಸಂಕಟ ಎರಡನ್ನೂ ಹೊರ ಹೊಮ್ಮಿಸಲು ಇರುವ ಶ್ವೇತಪತ್ರ. ಅವ್ಯವಸ್ಥೆಯನ್ನು ಕಂಡು ಪ್ರತಿಭಟನೆ ತೋರಿಸುವ ಜೊತೆಗಾರ. ಹೃದಯದ ಭಾವನೆಗಳನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳುವ ಅಕ್ಷರ ದೋಣಿ ಎಂದು ಬಸವರಾಜ್ ಹನುಮಲಿ ಅವರು ಕವನ ರಚನೆ ಕುರಿತಂತೆ ಮಾರ್ಮಿಕವಾಗಿ ವಿಶ್ಲೇಷಿಸಿದರು.



ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ, ತಮ್ಮಲ್ಲಿ ಪ್ರವೃತ್ತಿಯನ್ನಾಗಿಸಿ ಕೊಂಡಿದ್ದ ಬರವಣಿಗೆಯಲ್ಲಿ ಇನ್ನೂ ಹೆಚ್ಚಾಗಿ ತೊಡಗಿಸಿಕೊಳ್ಳುವುದರೊಂದಿಗೆ ಹೆಚ್.ಎನ್. ಶಿವಕುಮಾರ್ ಅವರು ಕನ್ನಡ ಸಾಹಿತ್ಯ ಸೇವೆಯಲ್ಲಿ ನಕ್ಷತ್ರದಂತೆ ಮಿನುಗುವಂತಾಗಲಿ ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ ಮಾತನಾಡಿ, ಹೆಚ್.ಎನ್. ಶಿವಕುಮಾರ್ ಅವರ ಸಂಕಲನ ಎಲ್ಲರ ಮನ ತಲುಪಲಿ, ಆ ಮೂಲಕ ಅವರು ಸಾಹಿತ್ಯ ಕ್ಷೇತ್ರದಲ್ಲಿ ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಆಶಿಸಿದರು.

ಮತ್ತೋರ್ವ ಅತಿಥಿಯಾಗಿದ್ದ 'ಜನತಾವಾಣಿ' ಉಪ ಸಂಪಾದಕ ಇ.ಎಂ. ಮಂಜುನಾಥ್ ಮಾತನಾಡಿ, ಇತರೆ ಕ್ಷೇತ್ರಗಳಿಗಿಂತ ಭಿನ್ನವಾಗಿರುವ ಸಾಹಿತ್ಯ ಕ್ಷೇತ್ರವು, ಜ್ಞಾನ - ವಿದ್ವತ್ ಇದ್ದಷ್ಟು ಅಪ್ಪಿಕೊಳ್ಳುವಂತದ್ದು. ಇಂತಹ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿರುವ ಹೆಚ್.ಎನ್. ಶಿವಕುಮಾರ್ ಅವರು ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಂಡು ಪ್ರತಿಭಾನ್ವಿತರಾಗಿದ್ದು, ಅವರಿಂದ ಸಾಹಿತ್ಯ ಕ್ಷೇತ್ರಕ್ಕೆ ಮತ್ತಷ್ಟು ಮೌಲ್ಯ ತಂದುಕೊಡುವಂತಹ ಕೆಲಸವಾಗಲಿ ಎಂದು ಆಶಯ ವ್ಯಕ್ತಪಡಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ನಗರದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಹಾಯಕ ನಿರ್ದೇಶಕರೂ ಆಗಿರುವ ಗಾಯಕ ಬಿ.ಟಿ. ಪ್ರಕಾಶ್ ಮಾತನಾಡಿ, ತನ್ನ ಆತ್ಮೀಯ ಒಡನಾಡಿ ಹೆಚ್.ಎನ್. ಶಿವಕುಮಾರ್ ಅವರ ಲೇಖನ, ಕವಿತೆಗಳು ಇನ್ನೂ ಗಟ್ಟಿಗೊಳ್ಳುವಂತಾಗಲಿ ಎಂದು ಹಾರೈಸಿದರು.

ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿಗಳಾದ ಬಿ. ದಿಳ್ಳೆಪ್ಪ, ರೇವಣಸಿದ್ದಪ್ಪ ಅಂಗಡಿ, ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ಮತ್ತು ಇತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ಈ ಕಾರ್ಯಕ್ರಮ ಏರ್ಪಾಡಾಗಿತ್ತು.

**ಬಹುಮುಖ ಪ್ರತಿಭೆ :** ಹೊಸದುರ್ಗ ತಾಲ್ಲೂಕಿನ ದೇವಪುರ ಗ್ರಾಮದವರಾದ, ಸಹಕಾರ ಇಲಾಖೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಯಾಗಿದ್ದ ದಿ. ಹೆಚ್.ಎಸ್. ನಾಗೇಂದ್ರಪ್ಪ ಮತ್ತು ಶ್ರೀಮತಿ ಸುಮಂಗಲ ದಂಪತಿ ದ್ವಿತೀಯ ಪುತ್ರ ಹೆಚ್.ಎನ್. ಶಿವಕುಮಾರ್ ಸಿವಿಲ್ ಇಂಜಿನಿಯರಿಂಗ್ ಪದವೀಧರರು.

ವೃತ್ತಿಯಲ್ಲಿ ಗುತ್ತಿಗೆದಾರರಾಗಿರುವ ಶಿವಕುಮಾರ್, ಕುವೆಂಪು ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಜನತಾ ಬಜಾರ್ ನಿರ್ದೇಶಕರಾಗಿ, ಆಟೋಮೊಬೈಲ್ ಸೊಸೈಟಿ ನಿರ್ದೇಶಕರಾಗಿ, ಮಹಾಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಸಹಕಾರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

ದಾವಣಗೆರೆ ಮಹಾನಗರ ಪಾಲಿಕೆ ಸದಸ್ಯರಾಗಿ ಸ್ಥಾಯಿ ಸಮಿತಿ ಅಧ್ಯಕ್ಷರಾಗಿಯೂ ರಾಜಕಾರಣದಲ್ಲಿ ಗುರುತಿಸಿಕೊಂಡಿರುವ ಅವರು, ಪ್ರತಿಷ್ಠಿತ ಲಯನ್ಸ್ ಜಿಲ್ಲಾ 317-ಸಿ ರಾಜ್ಯಪಾಲರಾಗಿ ಕೆಲಸ ಮಾಡುವುದರ ಮೂಲಕ ಸಾಮಾಜಿಕ ಸೇವಾ ಕ್ಷೇತ್ರದಲ್ಲೂ ಕೆಲಸ ಮಾಡುತ್ತಿದ್ದಾರೆ. ಇದೀಗ, ದಾವಣಗೆರೆ ಸ್ಮಾರ್ಟ್ ಸಿಟಿ ಸಲಹಾ ಮಂಡಳಿ ಸದಸ್ಯರಾಗಿದ್ದಾರೆ.

ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಹೆಚ್.ಎನ್. ಶಿವಕುಮಾರ್, ಕೊರೊನಾ ಪರಿಣಾಮ ಆಗಿದ್ದ ಲಾಕ್‌ಡೌನ್ ಸಂದರ್ಭದಲ್ಲಿ ತಮ್ಮ ಮನೆಯಲ್ಲಿ ಸಂಗ್ರಹಿಸಿದ್ದ ಹಲವಾರು ಪುಸ್ತಕಗಳನ್ನು ಓದುವುದರ ಮೂಲಕ ತಾವೂ ಏಕೆ ಲೇಖನ - ಕವಿತೆಗಳನ್ನು ಬರೆಯಬಾರದು ? ಎಂದು ತಮ್ಮನ್ನು ಪ್ರಶ್ನಿಸಿಕೊಂಡು ಅದರಲ್ಲಿ ಮಿಂದೆದ್ದು ಹಲವಾರು ಕವಿತೆಗಳಿಂದ ರೂಪುಗೊಂಡಿರುವುದೇ 'ಮುಂಗಾರು' ಸಂಕಲನ.

ಈ ಮೂಲಕ ತಾನು ಸಾಹಿತ್ಯ ಕ್ಷೇತ್ರಕ್ಕೆ ಬರಲು ಕಾರಣರಾದ ಆತ್ಮೀಯ ಒಡನಾಡಿಗಳಾದ ಹಿರಿಯ ಸಾಹಿತಿ ಬಸವರಾಜ ಹನುಮಲಿ, ಬಾ.ಮ. ಬಸವರಾಜಯ್ಯ, ಆರ್.ಟಿ. ಅರುಣ್‌ಕುಮಾರ್, ಬಿ.ಟಿ. ಪ್ರಕಾಶ್, ಎ.ಆರ್. ಉಜ್ಜಿನಪ್ಪ, ಬಿ. ವಾಮದೇವಪ್ಪ ಮತ್ತಿತರರು ನೀಡಿದ ಪ್ರೋತ್ಸಾಹ, ಸಹಕಾರಕ್ಕೆ ಹೆಚ್.ಎನ್. ಶಿವಕುಮಾರ್ ಕೃತಜ್ಞತೆ ಸಲ್ಲಿಸಿದ್ದಾರೆ.



" ನಾನು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನೂರಾರು ಕಾರ್ಯಕ್ರಮಗಳಲ್ಲಿ ಕೊಡುಗೆಯಾಗಿ ಬಂದ ಅನೇಕ ಪುಸ್ತಕಗಳು ಮನೆಯಲ್ಲಿ ಸಂಗ್ರಹವಾಗಿದ್ದವು. ಕೊರೊನಾ ಹಿನ್ನೆಲೆಯಲ್ಲಿ ಆಗಿದ್ದ ಲಾಕ್ ಡೌನ್ ಸಂದರ್ಭದಲ್ಲಿ ಆ ಪುಸ್ತಕಗಳನ್ನು ಒಂದೊಂದಾಗಿ ಓದುತ್ತಾ ಹೋದಂತೆ ಒಂದೊಂದು ಕವಿತೆ - ಲೇಖನಗಳು ಖುಷಿ ಕೊಡುತ್ತಿದ್ದವು. ಇದರಿಂದ ನಾನೂ ಏಕೆ ಲೇಖನ - ಕವಿತೆಗಳನ್ನು ಬರೆಯಬಾರದು ? ಎಂದು ನನ್ನ ಮನಸ್ಸಿನಲ್ಲಿ ಪ್ರಶ್ನೆಯಾಯಿತು. ಈ ಹಿನ್ನೆಲೆಯಲ್ಲಿ ಕವನಗಳನ್ನು ಬರೆದು ನನ್ನ ಆತ್ಮೀಯ ಒಡನಾಡಿಗಳಾಗಿದ್ದ ಸಾಹಿತಿಗಳಿಗೆ ವಾಟ್ಸಪ್ ಮೂಲಕ ಕಳುಹಿಸಿದಾಗ, ಮೆಚ್ಚುಗೆಗಳು ವ್ಯಕ್ತವಾದವು. ಅದರಿಂದ ಬರೆಯುವ ಅಭ್ಯಾಸವನ್ನು ಹೆಚ್ಚಿಸಿಕೊಂಡೆ. ರಚಿಸಿದ ಕವನಗಳ ಸಂಗ್ರಹವೇ ಇದೀಗ ಪುಸ್ತಕವಾಗಿ ರೂಪುಗೊಂಡಿದೆ.

**-ಹೆಚ್.ಎನ್. ಶಿವಕುಮಾರ್**

## ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುತ್ತಿದ್ದ ರವೀಂದ್ರ



**ಹರಪನಹಳ್ಳಿ**

ಹರಪನಹಳ್ಳಿ, ಜ. 16- ತಮ್ಮ ಸಹೋದರ, ಮಾಜಿ ಶಾಸಕ ದಿ.ಎಂ.ಪಿ. ರವೀಂದ್ರ ಕೇವಲ ರಾಜಕಾರಣಿ ಆಗಿರಲಿಲ್ಲ. ಕಲೆ, ಸಂಸ್ಕೃತಿ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುತ್ತಿದ್ದರು ಎಂದು ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ತಾಲ್ಲೂಕಿನ ನಿಟ್ಟೂರು ಗ್ರಾಮದ ಮರಳು ಪಾಯಿಂಟ್ ಬಳಿ ಎಂ.ಪಿ. ರವೀಂದ್ರ ಪ್ರತಿಷ್ಠಾನ ಹಾಗೂ ಎಂ.ಪಿ.ಲತಾ ಮಲ್ಲಿಕಾರ್ಜುನ್ ಅಭಿಮಾನಿಗಳ ಬಳಗದ ವತಿಯಿಂದ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಏರ್ಪಡಿಸಿದ್ದ ಔತಣಕೂಟ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಂ.ಪಿ.ರವೀಂದ್ರ ಅವರು ಸಿಹಿ ಭೋಜನ ಹಾಗೂ ಒಟ್ಟಾಗಿ ಸಂಗೀತ ಆಲಿಸುವಂತಹ ಕಾರ್ಯಕ್ರಮವನ್ನು ಪ್ರತಿ ವರ್ಷ ನಡೆಸಿಕೊಂಡು ಬರುತ್ತಿದ್ದರು. ಹಾಗಾಗಿ ಅವರ ಅಗಲಿಕೆಯ ನಂತರವೂ ಅವರ ಯಾವುದೇ ಕಾರ್ಯಕ್ರಮಗಳನ್ನು ನಿಲ್ಲಿಸದೇ ಮುಂದುವರೆಸಿಕೊಂಡು ಹೋಗುತ್ತಿರುವುದಾಗಿ ಅವರು ತಿಳಿಸಿದರು.

ರವಿ ಯುವ ಶಕ್ತಿ ಪಡೆ ಅಧ್ಯಕ್ಷ ಮಾಗಾನಹಳ್ಳಿ ಉದಯಶಂಕರ್, ಹಲುವಾಗಲು ಗ್ರಾ.ಪಂ. ಮಾಜಿ ಅಧ್ಯಕ್ಷರಾದ ರತ್ನಮ್ಮ ಸೋಮಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಹೆಚ್. ರಾಜಪ್ಪ, ಪುರಸಭೆ ಸದಸ್ಯರುಗಳಾದ ಎಂ.ವಿ. ಅಂಜಿನಪ್ಪ, ಗೊಂಗಡಿ ನಾಗರಾಜ, ಉದ್ದಾರ ಗಣೇಶ, ಲಾಟಿ ದಾದಾಪೀರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷರಾದ ಪುಷ್ಪಾ ದಿವಾಕರ್, ಮುಖಂಡ ಸುನೀಲ್‌ಕುಮಾರ್, ಬಾಣದ ಅಂಜಿನಪ್ಪ, ಟಿ. ಉಮಾಕಾಂತ, ಮೈದೂರು ರಾಮಣ್ಣ, ಹುಲಿಕಟ್ಟೆ ಚಂದ್ರಪ್ಪ, ಮತ್ತೂರು ಬಸವರಾಜ, ಕಲ್ಲಹಳ್ಳಿ ಗೋಣೆಪ್ಪ, ಕಂಚಿಕೇರಿ ಜಯಲಕ್ಷ್ಮಿ, ಮಂಜುಳಾ ಗುರುಮೂರ್ತಿ, ಚಿಕ್ಕೇರಿ ಬಸಪ್ಪ, ಹರಿಯಮ್ಮನಹಳ್ಳಿ ಶಿವರಾಜ್, ಸಾಸ್ವಿಹಳ್ಳಿ ನಾಗರಾಜ್, ಉಮಾಶಂಕರ್, ಕವಿತಾ ಸುರೇಶ, ಗುಂಡಗತ್ತಿ ನೇತ್ರಾವತಿ ಹಲುವಾಗಲು, ಎನ್.ಟಿ. ಸೋಮಣ್ಣ, ಶಿಕ್ಷ ಮೇಘರಾಜ, ಹಾರಕನಾಳು ಪ್ರಕಾಶಗೌಡ, ರಿಯಾಜ್, ಪ್ರಸಾದ ಕಾವಡಿ ಮತ್ತಿತರರು ಉಪಸ್ಥಿತರಿದ್ದರು.

## ಶಿವಮೊಗ್ಗ-ರಾಣೇಬೆನ್ನೂರು ಅವೈಜ್ಞಾನಿಕ ರೈಲ್ವೇ ಮಾರ್ಗ ಬದಲಿಸಲು ಮನವಿ



ದಾವಣಗೆರೆ, ಜ.16- ಶಿವಮೊಗ್ಗ-ರಾಣೇಬೆನ್ನೂರು ರೈಲ್ವೆ ಯೋಜನೆಯಲ್ಲಿ ಶಿಕಾರಿಪುರ- ಮಾಸೂರು- ರಾಣೇಬೆನ್ನೂರು ರೈಲ್ವೆ ಮಾರ್ಗವು ಅವಾಸ್ತವಿಕ ಮತ್ತು ಅವೈಜ್ಞಾನಿಕತೆಯಿಂದ ಕೂಡಿದೆ ಎಂದು ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಹೆಚ್.ಟಿ. ಬಳಿಗಾರ್ ದೂರಿದರು.

ಯೋಜನೆ ಬದಲಿಸುವಂತೆ ಒತ್ತಾಯಿಸಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಹಿರಿಯ ಭೂ ಸ್ವಾಧೀನಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಯೋಜನೆಗೆ ಹೊಸ ರೈಲು ಮಾರ್ಗ ಸಂಚರಿಸಲು ಅವಶ್ಯವಿರುವ ಭೂ-ಸ್ವಾಧೀನ ಕಾರ್ಯವನ್ನು ಕೆ.ಐ.ಎ.ಡಿ.ಬಿ ಯ ಕಾಯ್ದೆಯಡಿಯಲ್ಲಿ ಎರಡನೇ ಹಂತದಲ್ಲಿ ಪ್ರಾರಂಭಿಸಲಾಗಿದ್ದು, ಈ ರೈಲ್ವೆ ಮಾರ್ಗವು ಅವಾಸ್ತವಿಕ ಮತ್ತು ಅವೈಜ್ಞಾನಿಕ ಎಂದು ಮೇಲ್ನೋಟಕ್ಕೆ ಕಾಣುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೃಷಿ ಕುಟುಂಬಗಳೇ ವಾಸಿಸುವ ಗ್ರಾಮೀಣ ಪ್ರದೇಶವಾಗಿದ್ದು, ಇದು ಅವಾಸ್ತವಿಕ ಮತ್ತು ಅವೈಜ್ಞಾನಿಕ ರೈಲ್ವೆ ಯೋಜನೆ ಆಗುವುದರಲ್ಲಿ ಅನುಮಾನವಿಲ್ಲ. ಈ ಕೂಡಲೇ ಸಂಬಂಧಪಟ್ಟ ರೈಲ್ವೆ ಇಲಾಖೆ ಉದ್ದೇಶಿತ ಪೂರ್ವ ನಿಯೋಜಿತ ಮಾರ್ಗವನ್ನು ಕೈಬಿಡುವಂತೆ ಅವರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಮತಾ ಪರಮೇಶ್ವರಪ್ಪ, ನೀಲಮ್ಮ, ಎಂ.ಡಿ. ರಸೂಲ್, ಬಸವರಾಜಪ್ಪ, ವೀರಭದ್ರಪ್ಪ, ಲೋಕಪ್ಪ ಸೇರಿದಂತೆ ವಿವಿಧ ಗ್ರಾಮಗಳ ರೈತರು ಹಾಜರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸರಸ್ವತಿ ಬಡಾವಣೆ ಎ ಮತ್ತು ಬಿ ಬ್ಲಾಕ್, ಜಯನಗರ ಎ, ಬಿ ಮತ್ತು ಸಿ ಬ್ಲಾಕ್, ಭೂಮಿಕಾ ನಗರ, ಜೆ.ಎನ್. ಕಾನ್ವೆಂಟ್, ಕೆಎಸ್‌ಎಸ್ ಕಾಲೇಜ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು. ಪಿ. ಬಿ. ರೋಡ್, ರಿಲೈಯನ್ಸ್ ಮಾರ್ಕೆಟ್, ಸುಲ್ತಾನ್ ಡೈಮಂಡ್ಸ್, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಶಕ್ತಿನಗರ, ರಾಜೇಂದ್ರ ಬಡಾವಣೆ, ಜಯನಗರ ಬಿ ಬ್ಲಾಕ್, ಬನಶಂಕರಿ ದೇವಸ್ಥಾನ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಶಿವಪ್ಪ ಸರ್ಕಲ್, ಸ್ವಾಮಿ ಶಿವಯೋಗಿ ಕಾಂಪೌಂಡ್ ಮತ್ತು ಕೆ.ಟಿ.ಜೆ. ನಗರ 1 ರಿಂದ 17ನೇ ಕ್ರಾಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಇಂದು ಸಾಮೂಹಿಕ ಗಾಯತ್ರಿ ಪೂಜೆ

ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಹುಣ್ಣಿಮೆ ದಿನವಾದ ಇಂದು ಬೆಳಿಗ್ಗೆ 7ಕ್ಕೆ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಸಾಮೂಹಿಕ ಶ್ರೀ ಗಾಯತ್ರಿ ಪೂಜೆ ಬನದ ಹುಣ್ಣಿಮೆ ಆಚರಣೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷರಾದ ಡಾ. ಸುಶೀಲಮ್ಮ ತಿಳಿಸಿದ್ದಾರೆ. ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಏರ್ಪಾಡಾಗಿರುವ ಈ ಕಾರ್ಯಕ್ರಮಕ್ಕೆ ಮೋಹನ್‌ಕುಮಾರ್ ಗುಮ್ಮಾನಾಯ್ಕ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

## ಧೂಳೇಹೊಳೆ ಶಾಲೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳ ಪ್ರದರ್ಶನ



ಹರಿಹರ, ಜ.16- ತಾಲ್ಲೂಕಿನ ಧೂಳೇಹೊಳೆ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕುಮಾರಪಟ್ಟಣದ ಗುರು ದ್ರೋಣಾಚಾರ್ಯ ಸಮ್ಮಾನ ಪುರಸ್ಕೃತ ಚಿತ್ರಕಲಾವಿದ ಡಾ|| ಜಿ. ಜೆ. ಮೆಹೆಂದಳೆ ಚಿತ್ರಿಸಿದ ಸ್ವಾತಂತ್ರ್ಯ ಹೋರಾಟಗಾರರ ಭಾವ ಚಿತ್ರಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ಮುಖ್ಯೋಪಾಧ್ಯಾಯ ಬಸವರಾಜ ಉದ್ಘಾಟನೆ ಮಾಡಿ, ಸುಮಾರು ನಲವತ್ತು ಹೋರಾಟಗಾರರ ಚಿತ್ರಗಳು ಇಲ್ಲಿ ಅನಾವರಣಗೊಂಡಿವೆ. ಈ ಭಾವ ಚಿತ್ರಗಳ ಪ್ರದರ್ಶನದಿಂದ ನಮ್ಮ ಶಾಲೆಯ ಮಕ್ಕಳು ಹೋರಾಟಗಾರರ ಚಿತ್ರಗಳನ್ನು ಕಂಡು ಮೂಕವಿಸ್ಮಿತರಾಗಿದ್ದಾರೆ. ಮೆಹೆಂದಳೆಯವರ ಈ ಕಾರ್ಯ ಶ್ಲಾಘನೀಯವಾದುದು ಎಂದು ನುಡಿದರು.

ಭಾವಚಿತ್ರಗಳ ಕುರಿತು ಶರಣಕುಮಾರ ಹೆಗಡೆ ವಿವರಣೆ ನೀಡಿದರು. ಸಮಾರೋಪ ಭಾಷಣ ಮಾಡಿದ ಮಂಗಳಾ ಅವರು, ಮೆಹಂದಳೆ ಅವರಂತೆ ಏನಾದರೂ ಸಾಧನೆ ಮಾಡಿದಲ್ಲಿ ನೀವೂ ಕೂಡ ಸಾಧಕರಾಗಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಹಿತ ನುಡಿದರು. ಶಿಕ್ಷಕರಾದ ಉಮೇಶ್ ಎಚ್. ಎಂ, ಲೈಖಾಬಾನು, ಹೇಮಾ ಟಿ. ವಿ, ರಶ್ಮೀ ಡಿ. ಜಿ. ಉಪಸ್ಥಿತರಿದ್ದರು.

## ರಾಜ್ಯಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆ

ದಾವಣಗೆರೆ, ಜ.16- ನಗರದ ಶ್ರೀ ವೀರೇಶ್ವರ ಪುಣ್ಯಾಶ್ರಮದ ಆಶ್ರಯದಲ್ಲಿ ಗಾನಯೋಗಿ, ಕೀರ್ತಿಶೇಷ ಶ್ರೀ ಪಂಚಾಕ್ಷರಿ ಗವಾಯಿಗಳ ಮತ್ತು ಡಾ. ಪುಟ್ಟರಾಜ ಗವಾಯಿಗಳ ಹುಟ್ಟುಹಬ್ಬ ಹಾಗೂ ಶ್ರೀ ವೀರೇಶ್ವರ ಪುಣ್ಯಾಶ್ರಮದ ಆವರಣದಲ್ಲಿರುವ ಶಿಲಾ ಮಂಟಪದ (ಧ್ಯಾನ ಮಂದಿರ) ಲೋಕಾರ್ಪಣೆ ಅಂಗವಾಗಿ ಫೆಬ್ರವರಿ 2 ರಿಂದ ಮಾರ್ಚ್ 3 ರವರೆಗೆ ನಿರಂತರವಾಗಿ ಒಂದು ತಿಂಗಳ ಕಾಲ ರಾಜ್ಯಮಟ್ಟದ ಕನ್ನಡ ಸಮೂಹ ಭಜನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಭಜನಾ ತಂಡಗಳ ಹೆಸರನ್ನು ಇದೇ ದಿನಾಂಕ 25 ರೊಳಗೆ ನೋಂದಾಯಿಸುವಂತೆ ಸಮಿತಿ ಪ್ರಧಾನ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ ತಿಳಿಸಿದ್ದಾರೆ.

ವಿವರಕ್ಕೆ 9480176601, 6361941240 ಕ್ಕೆ ಸಂಪರ್ಕಿಸುವಂತೆ ಹಿರಿಯ ಭಜನಾ ಕಲಾವಿದರೂ, ಸಮಿತಿಯ ಸಂಘಟನಾ ಕಾರ್ಯದರ್ಶಿ ಎ. ಕೊಟ್ರಪ್ಪ ಕಿತ್ತೂರು ವಿನಂತಿಸಿದ್ದಾರೆ.

## ಧಾರ್ಮಿಕ ಕೇಂದ್ರ, ಜ್ಞಾನಾರ್ಜನೆಯ ಮಗ್ಗುಲಲ್ಲಿ ಅಸ್ವಚ್ಛತೆ

**ಓದುಗರ ಪತ್ರಗಳು**

**ಮಾನ್ಯರೇ,**

ಧಾರ್ಮಿಕ ಕೇಂದ್ರವೊಂದರ ಪ್ರದೇಶದ ಮಗ್ಗುಲಲ್ಲಿ ಕೆಲವರಿಂದ ಅನಾಗರಿಕತೆ ಮತ್ತು ಅಸ್ವಚ್ಛತೆ ಮೈದಾಳಿದೆ.

ಹೌದು, ದಾವಣಗೆರೆಯ ಎಕ್ಸ್ ಮುನಿಸಿಪಲ್ ಕಾಲೇಜಿನ ಎದುರಿನಲ್ಲಿರುವ ಕ್ರೈಸ್ತ ಸಮುದಾಯದ ಚರ್ಚ್ ಹೊರಾಂಗಣದಲ್ಲಿ ಒಂದು ಭಾಗದ ಕಾಂಪೌಂಡ್ ಬಳಿಯೇ ಕೆಲವರು ಸಾರ್ವಜನಿಕವಾಗಿ ಯಾವುದೇ ಮುಜುಗರವಿಲ್ಲದೇ ಮೂತ್ರ ವಿಸರ್ಜಿಸುವುದು ಅನಾಗರಿಕತೆಗೆ ಹಿಡಿದ ಕೈಗನ್ನಡಿಯಾಗಿದೆ. ಅಲ್ಲಿ ಹಗಲೊತ್ತಿನಲ್ಲೂ ಇಂತಹ ಮುಜುಗರದ ಸನ್ನಿವೇಶ ಕಾಣಸಿಗುತ್ತದೆ.

ಕನಿಷ್ಟ ಪಕ್ಷ ಇಂತಹ ಮುಜುಗರದ ಸನ್ನಿವೇಶ ತಮ್ಮ ಮಾನಕ್ಕೆ ಹಾನಿ ಎಂಬ ಪರಿವೇ ಇಲ್ಲದಿರುವುದು ಸೋಜಿಗವೇ ಸರಿ ಎನ್ನುತ್ತಾರೆ ನಾಗರಿಕ ಲಕ್ಷಣವುಳ್ಳವರು.





ಸಮೀಪವೇ ಸುಲಭ ಶೌಚಾಲಯವಿದ್ದರೂ ಅದರತ್ತ ತೆರಳದೇ ಕಾಂಪೌಂಡ್ ಬಳಿಯೇ ಮೂತ್ರ ವಿಸರ್ಜಿಸುವುದು ದಿನವೂ ಆಗುತ್ತಿದ್ದು, ಇದರಿಂದ ಅಲ್ಲಿ ದುರ್ವಾಸನೆ ಬೀರುವುದಲ್ಲದೇ ಮಾರಕ ಕೀಟಗಳ ಉತ್ಪತ್ತಿಗೆ ಕಾರಣವಾಗಿದೆ. ಅಲ್ಲಿ ಎದುರಿಗೇ ವಾಣಿಜ್ಯ ಮಳಿಗೆಗಳಿದ್ದು, ವ್ಯಾಪಾರಸ್ಥರು ಇದನ್ನು ಕಂಡೂ ಕಾಣದಂತಾಗಿದ್ದು, ಅನಾಗರಿಕತೆ ನಡವಳಿಕೆಗೆ ತಿಳುವಳಿಕೆ ಮೂಡಿಸಿದರೂ ಕಿವಿಗೊಡದ ಬಗ್ಗೆ ರೋಸಿ ಹೋಗಿದ್ದಾರೆ.

ಇನ್ನೂ ಅಲ್ಲಿ ಕಟ್ಟಡದ ಅವಶೇಷಗಳು, ಕೆಲ ತ್ಯಾಜ್ಯ ಕಾಣಸಿಗಲಿದ್ದು, ಚರ್ಚ್ ಸಮೀಪದ ರಸ್ತೆಯಲ್ಲಿ ಚರಂಡಿ ನೀರು ಹರಿದು ನಿಲ್ಲುವುದು, ಕಸದ ರಾಶಿಯೇ ಅಸ್ವಚ್ಛತೆಯನ್ನು ಬೆರಳು ಮಾಡಿ ತೋರಿಸುವಂತಿದೆ. ಅಲ್ಲೂ ದುರ್ವಾಸನೆ ಬೀರುವ ಜೊತೆಗೆ ಮಾರಕ ಕೀಟಗಳ ಉತ್ಪತ್ತಿ, ಮಾರಕ ಕಾಯಿಲೆಗಳ ಸೃಷ್ಟಿಗೆ ಎಡೆಮಾಡಿಕೊಡುತ್ತಿದೆ ಎಂಬ ಆತಂಕವನ್ನೂ ಸೃಷ್ಟಿಸಿದೆ.

ಕೊರೊನಾ ಮಹಾಮಾರಿ ದೇಶಕ್ಕೆ ಕಾಲಿಟ್ಟು ಸಾಕಷ್ಟು ಜನರ ಜೀವ ಬಲಿ ಪಡೆಯಿತು. ಸ್ವಚ್ಛತೆ ಬಹು ಮುಖ್ಯ ಎಂಬುದನ್ನು ತೋರಿಸಿಕೊಟ್ಟಿತು. ಹೀಗಿದ್ದರೂ ಸಹ ಯಾವುದೇ ಭಯವಿಲ್ಲದೇ ಅಸ್ವಚ್ಛತೆಗೆ ಕಾರಣೀಭೂತರಾಗುವುದು ಎಷ್ಟು ಸರಿ. ಈ ಬಗ್ಗೆ ಸಂಬಂಧ ಪಟ್ಟ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬ ಒತ್ತಾಯದ ಜೊತೆಗೆ ನಾಗರಿಕರಾಗಿ ಜವಾಬ್ದಾರಿ ಮರೆಯಬಾರದೆಂಬ ಅರಿವಿನ ಮಾತುಗಳು ಕೇಳಿ ಬರುತ್ತಿವೆ.

**- ನೊಂದ ನಾಗರಿಕರು**


## ಪೆಟ್ರೋಲ್ ಬಂಕ್ ಬಳಿ ಕ್ರೆಡಿಟ್ ಕಾರ್ಡ್ ಕೊಳ್ಳುವ ಮುನ್ನ ಎಚ್ಚರ...

**ಮಾನ್ಯರೇ,**

ಇತ್ತೀಚಿನ ದಿನಗಳಲ್ಲಿ ಕ್ರೆಡಿಟ್ ಕಾರ್ಡ್ ಹಾವಳಿ ಹೆಚ್ಚಾಗಿದ್ದು, ಎಲ್ಲಾ ಬ್ಯಾಂಕ್‌ಗಳು ತಮ್ಮ ಗ್ರಾಹಕರಿಗೆ ಅವರ ಅರ್ಹತೆ ಆಧಾರದ ಮೇಲೆ ಕ್ರೆಡಿಟ್ ಕಾರ್ಡ್ ನೀಡುವುದು ಸಾಮಾನ್ಯವಾಗಿದೆ. ಈ ಹಿಂದೆ ಬ್ಯಾಂಕುಗಳು ಕೆಲವೇ ಕೆಲವು ಗ್ರಾಹಕರಿಗೆ ಕ್ರೆಡಿಟ್ ಕಾರ್ಡ್ ನೀಡುತ್ತಿದ್ದರು. ಆದರೆ, ಈಗ ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಯೊಬ್ಬರಿಗೂ ಕ್ರೆಡಿಟ್ ಕಾರ್ಡ್ ನೀಡಲು ಬ್ಯಾಂಕ್ ಗಳು ತಾ ಮುಂದು ನಾ ಮುಂದು ಎಂಬಂತೆ ಮುಗಿಬೀಳುತ್ತಿದ್ದಾರೆ.

ಕ್ರೆಡಿಟ್ ಕಾರ್ಡ್ ಪಡೆಯುವ ಮುನ್ನ ಗ್ರಾಹಕರು ಎಚ್ಚರದಿಂದ ಇರಬೇಕು ಎಂಬುದಕ್ಕೆ ನಗರದಲ್ಲಿ ನಡೆದ ಒಂದು ನಿದರ್ಶನ ಸಾಕ್ಷಿಯಾಗಿದೆ. ನಗರದ ಕೆಇಬಿ ಸರ್ಕಲ್ ನಲ್ಲಿರುವ ಪೆಟ್ರೋಲ್ ಬಂಕ್ ನಲ್ಲಿ ಕ್ರೆಡಿಟ್ ಕಾರ್ಡ್ ಸಿಬ್ಬಂದಿ ಹಾಗೂ ಗ್ರಾಹಕರು ಜಗಳ ಮಾಡುತ್ತಿದ್ದದ್ದು ಕಂಡುಬಂತು.





ಎಸ್.ಬಿ.ಐ. ಬ್ಯಾಂಕ್ ಸಹಯೋಗದೊಂದಿಗೆ ಖಾಸಗಿ ಏಜೆನ್ಸಿ ಒಂದು ಪೆಟ್ರೋಲ್ ಬಂಕ್ ಗೆ ಬರುವ ಗ್ರಾಹಕರಿಗೆ ಕ್ರೆಡಿಟ್ ಕಾರ್ಡ್ ನೀಡಿತ್ತು, ಕ್ರೆಡಿಟ್ ಕಾರ್ಡ್ ನೀಡುವಾಗ ವಾರ್ಷಿಕ 499 ರೂಗಳು ಮಾತ್ರ ನೀಡಬೇಕು ಜೀರೋ ಮೆಂಟೇನೆನ್ಸ್ ಎಂದು ಹೇಳಿ ಉಪಯೋಗಿಸಿದ ಹಣವನ್ನು ಮಾತ್ರ ನಿಗದಿತ ಸಮಯಕ್ಕೆ ನೀಡಬೇಕು ಎಂದು 6 ತಿಂಗಳ ಹಿಂದೆ ಮಹಿಳಾ ಗ್ರಾಹಕರೊಬ್ಬರಿಗೆ ಕ್ರೆಡಿಟ್ ಕಾರ್ಡ್ ನೀಡಲಾಗಿತ್ತು. ಆದರೆ ಆ ಮಹಿಳೆ ಕ್ರೆಡಿಟ್ ಕಾರ್ಡ್ ನಿಂದ ಕಳೆದ ಆರು ತಿಂಗಳುಗಳಿಂದ ಏನನ್ನೂ ಖರೀದಿ ಮಾಡಿರಲಿಲ್ಲ. ಆದರೆ, ವಾರ್ಷಿಕ ಚಾರ್ಜ್ 499 ಕಟ್ಟಿಲ್ಲ ಎಂದು ಆರು ತಿಂಗಳಿಗೆ 10 ಸಾವಿರ ರೂ ಬಿಲ್ ಮಾಡಿರುವುದು ಮಹಿಳೆಯ ಗಮನಕ್ಕೆ ಬಂದು ಅವರು ಸಂಬಂಧಪಟ್ಟ ಎಸ್‌ಬಿಐ ಬ್ಯಾಂಕಿಗೆ ಹೋಗಿ ವಿಚಾರಿಸಿದರೆ ಬ್ಯಾಂಕ್ ಸಿಬ್ಬಂದಿ ಅದಕ್ಕೂ ನಮಗೂ ಸಂಬಂಧವಿಲ್ಲ ಎಲ್ಲಿ ಪಡೆದಿದ್ದೀರೋ ಅಲ್ಲಿ ವಿಚಾರಿಸಿ ಎಂಬ ಉಡಾಫೆ ಉತ್ತರ ನೀಡಿ ಕಳುಹಿಸಿದ್ದಾರೆ ಎಂದು ಮಹಿಳೆ ನೋವು ತೋಡಿಕೊಂಡರು.

ಪೆಟ್ರೋಲ್ ಬಂಕ್‌ನಲ್ಲಿ ಇದ್ದ ಖಾಸಗಿ ಏಜೆನ್ಸಿ ಸಿಬ್ಬಂದಿಗೆ ವಿಚಾರಿಸಿದರೆ ಅವರು ಸಹ ಉಡಾಫೆ ಉತ್ತರ ನೀಡುತ್ತಿದ್ದು ಕಂಡುಬಂತು, 499 ಕಟ್ಟಿಲ್ಲ ಎಂದು ಆರು ತಿಂಗಳಿಗೆ ಹತ್ತು ಸಾವಿರ ರೂ. ಬಿಲ್ ಮಾಡಿರುವುದು ಎಷ್ಟು ಸರಿ ಎಂಬುದು ಎಲ್ಲರ ಪ್ರಶ್ನೆಯಾಗಿದೆ.

ಬಂಕ್ ಸಿಬ್ಬಂದಿಗೆ ಇದರ ಬಗ್ಗೆ ವಿಚಾರಿಸಿದರೆ ಖಾಸಗಿ ಏಜೆನ್ಸಿಯವರು ದೊಡ್ಡ ಮಟ್ಟದಲ್ಲಿ ನಮ್ಮ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿ ಇಲ್ಲಿಗೆ ಬಂದಿರುತ್ತಾರೆ, ನಾವು ಏನನ್ನೂ ಹೇಳುವ ಸ್ಥಿತಿಯಲ್ಲಿ ಇಲ್ಲ. ಗ್ರಾಹಕರು ಕ್ರೆಡಿಟ್ ಕಾರ್ಡ್ ಪಡೆಯುವ ಮುನ್ನ ಎಚ್ಚರ ವಹಿಸಬೇಕು ಎಂದು ಹಾರಿಕೆ ಉತ್ತರ ನೀಡುತ್ತಾರೆ.

ಅಂತಿಮವಾಗಿ ಅಲ್ಲಿ ನೆರೆದಿದ್ದ ಪ್ರತಿಯೊಬ್ಬರ ಪ್ರಶ್ನೆ ಒಂದೇ 499 ರೂ. ಗೆ ಆರು ತಿಂಗಳಿಗೆ 10 ಸಾವಿರ ರೂ ಬಿಲ್ ಬರುವುದಾದರೆ ಶೇಕಡವಾರು ಬಡ್ಡಿ ಎಷ್ಟು ಆದಂತೆ ಎಂಬುದೇ ?

**-ಕೆ.ಎಲ್.ಹರೀಶ್ ಬಸಾಪುರ**

## ನ್ಯಾಮತಿಯಲ್ಲಿ ಇಂದು ಬೆವಿಕಂ ಸಭೆ

ಬೆವಿಕಂ ಉಪವಿಭಾಗದಲ್ಲಿ ಇಂದು ಸಂಜೆ 3 ಗಂಟೆಗೆ ಗ್ರಾಹಕರ ಕುಂದು-ಕೊರತೆಗಳ ಮಾಸಿಕ ಸಭೆಯನ್ನು ಏರ್ಪಡಿಸ ಲಾಗಿದೆ ಎಂದು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿ ಯರ್ ಬಿ.ಕೆ. ಶ್ರೀನಿವಾಸ ತಿಳಿಸಿದ್ದಾರೆ.

## ಪೋಷಕರ ವಿಯೋಗ

**(1ನೇ ಪುಟದಿಂದ)** ನಾಲ್ವರು ಅನಾಥರಾಗಿದ್ದಾರೆ.

8ರಿಂದ 13 ವರ್ಷದ 59,010 ಮಕ್ಕಳು, 14ರಿಂದ 15 ವರ್ಷದ 22,763 ಹಾಗೂ 16-18 ವರ್ಷದ 22,626 ಹಾಗೂ ನಾಲ್ಕರಿಂದ ಏಳು ವರ್ಷದ 26,080 ಮಕ್ಕಳು ಈ ವರ್ಗದವರಲ್ಲಿದ್ದಾರೆ.

1,25,205 ಮಕ್ಕಳು ತಂದೆ ಇಲ್ಲವೇ ತಾಯಿಯ ಬಳಿ ಇದ್ದಾರೆ. 11,272 ಮಕ್ಕಳು ಕುಟುಂಬದ ಸದಸ್ಯರ ಬಳಿ ಹಾಗೂ 8,450 ಮಕ್ಕಳು ಪೋಷಕರ ಬಳಿ ಇದ್ದಾರೆ. ಬಾಲಮಂದಿರಗಳಲ್ಲಿ 1,529 ಮಕ್ಕಳಿದ್ದಾರೆ.

ಒಡಿಶಾದಲ್ಲಿ ಅತಿ ಹೆಚ್ಚಿನ 24,405 ಮಕ್ಕಳನ್ನು ಗುರುತಿಸಲಾಗಿದೆ. ಮಹಾರಾಷ್ಟ್ರದಲ್ಲಿ 19,623, ಗುಜರಾತ್‌ನಲ್ಲಿ 14,770, ತಮಿಳುನಾಡಿನಲ್ಲಿ 11,014, ಉತ್ತರ ಪ್ರದೇಶದಲ್ಲಿ 9,247, ಆಂಧ್ರ ಪ್ರದೇಶದಲ್ಲಿ 8,760, ಮಧ್ಯ ಪ್ರದೇಶದಲ್ಲಿ 7,340, ಪಶ್ಚಿಮ ಬಂಗಾಳದಲ್ಲಿ 6,835, ದೆಹಲಿಯಲ್ಲಿ 6,629 ಹಾಗೂ ರಾಜಸ್ಥಾನದಲ್ಲಿ 6,827 ಮಕ್ಕಳಿದ್ದಾರೆ.


## ಬೇಕಾಗಿದ್ದಾರೆ

**ಮೆ|| ಆರ್. ಹನುಮಂತಪ್ಪ ಅಂಡ್ ಸನ್‌ನ ಶ್ರೀ ಲಾಡ್ಜ್‌ನಲ್ಲಿ**

ಕಂಪ್ಯೂಟರ್ ಜ್ಞಾನ ಮತ್ತು ಅನುಭವ ಹೊಂದಿರುವವರು ಸೂಪರ್‌ವೈಸರ್ ಮತ್ತು ರೂಂ ಬಾಯ್ ಎರಡೂ ಹುದ್ದೆಗಳಿಗೆ ಶಿಫ್ಟ್‌ಗಳಲ್ಲಿ ಕೆಲಸ ಮಾಡಲು ಸಿದ್ಧವಿರುವ ಕೆಲಸಗಾರರು ಬೇಕಾಗಿದ್ದಾರೆ.

ಆಸಕ್ತರು ಈ ಕೆಳಗಿನ ವಿಳಾಸಕ್ಕೆ ಅರ್ಜಿ ಸಲ್ಲಿಸಲು ಕೋರಲಾಗಿದೆ.

**ಮೆ|| ಆರ್. ಹನುಮಂತಪ್ಪ ಅಂಡ್ ಸನ್**

ಹನುಮಂತಪ್ಪನವರ ಕಟ್ಟಡ, ಪೂನಾ-ಬೆಂಗಳೂರು ರಸ್ತೆ, ದಾವಣಗೆರೆ-577 002.

**ಫೋ. : 8192 258834, 258836**



## ಸಾರ್ವಜನಿಕ ಪ್ರಕಟಣೆ

**ನಾನು, ಬಸವರಾಜ ಓಂಕಾರಿ,** ವಕೀಲರು, 2ನೇ ಮೇನ್, 40 ಅಡಿ ರಸ್ತೆ, ವಿದ್ಯಾನಗರ 'ಎ' ಬ್ಲಾಕ್, ಫ್ಯಾಮಿಲಿ ಕ್ಲಬ್ ಹತ್ತಿರ, ಹರಿಹರ-577601, ಮೊ: ನಂ. 94483 19177, ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರಾದ **ಹೆಚ್.ಎಂ. ಶಶಿಧರ ತಂದೆ ಲೇಟ್ ಮಲ್ಲಪ್ಪ ರೆಡ್ಡಿ,** ವಿದ್ಯಾನಗರ 'ಬಿ' ಬ್ಲಾಕ್, ಹರಿಹರ, ಇವರು ಈ ಪ್ರಕಟಣೆಯಲ್ಲಿ ತೋರಿಸಿರುವ ಜಮೀನುಗಳನ್ನು ಮತ್ತು ಸದರಿ ಆಸ್ತಿಗಳ ಖಾತೆ ಮತ್ತು ಸ್ವಾಧೀನದಾರರಾದ ಸಿ. ಚಿದಾನಂದಪ್ಪ ತಂದೆ ಚನ್ನಬಸಪ್ಪ ಮತ್ತು ಇವರ ಪತ್ನಿ ಶ್ರೀಮತಿ ವಿದ್ಯಾ ಸಿ. ಕೋಂ ಸಿ. ಚಿದಾನಂದಪ್ಪ, ಪರಸಪ್ಪ ಲೇಔಟ್, ಹರಿಹರ ಇವರುಗಳಿಂದ ಕ್ರಯಕ್ಕೆ ಪಡೆಯುವವರಿದ್ದು, ಸದರಿ ಆಸ್ತಿಗಳ ಮೇಲೆ ಯಾರಾದರೂ ಕಾನೂನು ಬದ್ಧ ಹಕ್ಕುದಾರರಿದ್ದು ಮತ್ತು ಭೋಜ, ಅಡಮಾನ ಮಾಡಿಸಿಕೊಂಡಿದ್ದರೆ ಹಾಗೂ ಮೇಲ್ಕಂಡ ಕ್ರಯಕ್ಕೆ ತಂಟೆ, ತಕರಾರು ಇದ್ದರೆ ದಾಖಲಾತಿಗಳೊಂದಿಗೆ ಈ ಪ್ರಕಟಣೆಯಾದ 7 ದಿನಗಳ ಒಳಗೆ ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ಖುದ್ದು ಬಂದು ಭೇಟಿಯಾಗಬಹುದು. ಲಿಖಿತವಾಗಿ ತಕರಾರು ಸಲ್ಲಿಸಬಹುದೆಂದು ಪ್ರಕಟಿಸಲಾಗಿದೆ.

**ಆಸ್ತಿ ಷೆಡ್ಯೂಲ್ :** 1) ಹರಿಹರ ತಾಲ್ಲೂಕು ಕಸಬಾ ಹೋಬಳಿ ಮಹಜೇನಹಳ್ಳಿ ಗ್ರಾಮ ಹಾಗೂ ಹರಿಹರ ಸಬ್ ರಿಜಿಸ್ಟ್ರಾರ್ ಕಚೇರಿ ವ್ಯಾಪ್ತಿಗೆ ಒಳಪಟ್ಟ ರಿ. ಸರ್ವೆ ನಂ. 68/1ಎ2ಎ1, ವಿಸ್ತೀರ್ಣ 1 ಎಕರೆ, 08 ಗುಂಟೆ. 2) ಹರಿಹರ ತಾಲ್ಲೂಕು ಕಸಬಾ ಹೋಬಳಿ ಮಹಜೇನಹಳ್ಳಿ ಗ್ರಾಮ ಹಾಗೂ ಹರಿಹರ ಸಬ್ ರಿಜಿಸ್ಟ್ರಾರ್ ಕಚೇರಿ ವ್ಯಾಪ್ತಿಗೆ ಒಳಪಟ್ಟ ರಿ. ಸರ್ವೆ ನಂ. 68/1ಎ2ಎ2, ವಿಸ್ತೀರ್ಣ 24 ಗುಂಟೆ, 08 ಸೆಂಟ್ಸ್. 3) ಹರಿಹರ ತಾಲ್ಲೂಕು ಕಸಬಾ ಹೋಬಳಿ ಮಹಜೇನಹಳ್ಳಿ ಗ್ರಾಮ ಹಾಗೂ ಹರಿಹರ ಸಬ್ ರಿಜಿಸ್ಟ್ರಾರ್ ಕಚೇರಿ ವ್ಯಾಪ್ತಿಗೆ ಒಳಪಟ್ಟ ರಿ.ಸರ್ವೆ ನಂ. 68/1ಎ2ಎ3, ವಿಸ್ತೀರ್ಣ 24 ಗುಂಟೆ, 08 ಸೆಂಟ್ಸ್.

ಒಟ್ಟು ಜಮೀನಿಗೆ ಚಕ್ಕುಬಂದಿ : ಮೇಲ್ಕಂಡ ಆಸ್ತಿಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ಒಟ್ಟು ಚಕ್ಕುಬಂದಿ. ಪೂ: ಕೊಂಡಜ್ಜಿ ಹನುಮಂತಪ್ಪನವರ ಜಮೀನು, ಪ: ಕೃಷ್ಣಪ್ಪನವರ ಜಮೀನು, ಉ: ಕೆಂಚಪ್ಪನವರ ಜಮೀನು, ದ: ರಾಷ್ಟ್ರೀಯ ಹೆದ್ದಾರಿ ಸರ್ವೀಸ್ ರಸ್ತೆ.

**ಸಹಿ/-**

**ಬಸವರಾಜ ಓಂಕಾರಿ, ವಕೀಲರು, ಹರಿಹರ.**

## ಆವರಗೆರೆಯಲ್ಲಿ ಬನಶಂಕರಿ ದೇವಿ ಮಹೋತ್ಸವ



ಶ್ರೀ ಬನಶಂಕರಿ ದೇವಿಯ ಮಹೋತ್ಸವ ಕಾರ್ಯಕ್ರಮವು ಇಂದು ಬೆಳಿಗ್ಗೆ 5 ಗಂಟೆಗೆ ದೇವಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಕುಂಕುಮಾರ್ಚನೆ, ಪುಷ್ಪ ಅಲಂಕಾರ ಪೂಜೆ ಹಾಗೂ ಭಕ್ತಾದಿಗಳಿಂದ ಉಡಿ ಅಕ್ಕಿ ಸೇವೆ ಮತ್ತು ಸಂಜೆ 7ಕ್ಕೆ ಬಾಯಿ ಬೀಗದೊಂದಿಗೆ ದೇವಿ ಸನ್ನಿಧಾನದವರೆಗೆ ಪಾದ ನಡಿಗೆ ಮೂಲಕ ಮೆರವಣಿಗೆ ಹಾಗೂ 8.30ಕ್ಕೆ ಅನ್ನ ಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶ್ರೀ ಬನಶಂಕರಿ ದೇವಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರೂ ಆಗಿರುವ ಹಿರಿಯ ನ್ಯಾಯವಾದಿ ಎಸ್.ಪರಮೇಶ್ ತಿಳಿಸಿದ್ದಾರೆ.

# ವರ್ಷ ಪೂರೈಸಿದ ಲಸಿಕಾ ಅಭಿಯಾನ 156.76 ಕೋಟಿ ಡೋಸ್ ಲಸಿಕೆ ವಿತರಣೆ

ನವದೆಹಲಿ, ಜ. 16 – ದೇಶದಲ್ಲಿ ಲಸಿಕಾ ಅಭಿಯಾನಕ್ಕೆ ಒಂದು ವರ್ಷ ತುಂಬಿದೆ. ವರ್ಷದಲ್ಲಿ 156.76 ಕೋಟಿ ಡೋಸ್ ಲಸಿಕೆಗಳನ್ನು ನೀಡಲಾಗಿದೆ.

ಕೇಂದ್ರ ಆರೋಗ್ಯ ಸಚಿವಾಲಯದ ಮಾಹಿತಿಯ ಪ್ರಕಾರ, ಲಸಿಕೆಗೆ ಅರ್ಹರಾದ ಶೇ.93ರಷ್ಟು ಜನರು ಮೊದಲ ಡೋಸ್ ಹಾಗೂ ಶೇ.69.8ರಷ್ಟು ಜನರು ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ.

ಲಸಿಕಾ ಅಭಿಯಾನಕ್ಕೆ ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಅಂಚೆ ಚೀಟಿಯೊಂದನ್ನು ಬಿಡುಗಡೆ ಮಾಡಿದೆ.

ಕಳೆದ ವರ್ಷ ಏಪ್ರಿಲ್ 1ರ ವೇಳೆಗೆ 10 ಕೋಟಿ ಡೋಸ್ ಲಸಿಕೆ ನೀಡಲಾಗಿತ್ತು. ಜೂನ್ 25ರ ವೇಳೆಗೆ 25 ಕೋಟಿ ಡೋಸ್, ಆಗಸ್ಟ್ 6ರ ವೇಳೆಗೆ 50 ಕೋಟಿ ಡೋಸ್ ಹಾಗೂ ಸೆಪ್ಟೆಂಬರ್ 13ರ ವೇಳೆಗೆ 75 ಕೋಟಿ ಡೋಸ್ ಲಸಿಕೆ ನೀಡಲಾಗಿತ್ತು.

ಕಳೆದ ವರ್ಷ ಜನವರಿ 16ರಂದು ಆರೋಗ್ಯ ಕಾರ್ಯಕರ್ತರಿಗೆ ಮೊದಲ ಹಂತದಲ್ಲಿ ಲಸಿಕೆ




ನೀಡಲಾಗಿತ್ತು. ಫೆಬ್ರವರಿ 2ರಿಂದ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲಾಗಿತ್ತು.

ಮಾರ್ಚ್ 1ರಿಂದ 60 ವರ್ಷ ಮೀರಿದವರು ಹಾಗೂ 45 ವರ್ಷ ಮೀರಿದ ಸಹ ಅಸ್ವಸ್ಥರಿಗೆ ಲಸಿಕೆ ನೀಡಲು ಕ್ರಮ ತೆಗೆದುಕೊಳ್ಳಲಾಗಿತ್ತು.

ಏಪ್ರಿಲ್ 1ರಿಂದ 45 ವರ್ಷ ಮೀರಿದ ಎಲ್ಲರಿಗೂ ಲಸಿಕೆ ನೀಡಲಾಯಿತು. ಮೇ 1ರಿಂದ 18 ವರ್ಷ ಮೀರಿದ ಎಲ್ಲರಿಗೂ ಲಸಿಕೆ ನೀಡಲು ಅನುಮತಿ ನೀಡಲಾಗಿತ್ತು.

ಈ ವರ್ಷ ಜನವರಿ 3ರಿಂದ 15-18ರ ವಯಸ್ಸಿನವರಿಗೆ ಲಸಿಕೆ ನೀಡಲಾಗುತ್ತಿದೆ.

ಜನವರಿ 10ರಿಂದ ಆರೋಗ್ಯ ಹಾಗೂ ಮುಂಚೂಣಿ ಕಾರ್ಯಕರ್ತರು ಮತ್ತು 60 ವರ್ಷ ಮೀರಿದ ಸಹ ಅಸ್ವಸ್ಥತೆ ಉಳ್ಳವರಿಗೆ ಮುನ್ನೆಚ್ಚರಿಕೆ ಲಸಿಕೆ ನೀಡಲಾಗುತ್ತಿದೆ.

ಭಾರತದ ಲಸಿಕಾ ಕಾರ್ಯಕ್ರಮ ವಿಶ್ವದಲ್ಲೇ ಅತಿ ಹೆಚ್ಚು ಯಶಸ್ಸು ಗಳಿಸಿದ ಹಾಗೂ ದೊಡ್ಡ ಪ್ರಮಾಣದ ಅಭಿಯಾನವಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಕಳೆದ ವರ್ಷದಲ್ಲಿ ಒಂಭತ್ತು ತಿಂಗಳಲ್ಲಿ 100 ಡೋಸ್ ಲಸಿಕೆ ತಲುಪಿದ ಹಾಗೂ ಒಂದೇ ದಿನ 2.51 ಕೋಟಿ ಡೋಸ್ ಲಸಿಕೆ ನೀಡಿದ ಸಾಧನೆಗಳು ದಾಖಲಾಗಿವೆ.

ಕಳೆದ ವರ್ಷ ಅಕ್ಟೋಬರ್ 21ರಂದು 100 ಕೋಟಿ ಡೋಸ್ ಲಸಿಕೆ ಗಡಿ ದಾಟಲಾಗಿತ್ತು. ಜನವರಿ 7ರಂದು 150 ಕೋಟಿ ಡೋಸ್‌ಗಳ ಗಡಿ ದಾಟಲಾಗಿದೆ. ದೇಶದಲ್ಲೀಗ ಪ್ರತಿದಿನ ಸರಾಸರಿ 66 ಲಕ್ಷ ಡೋಸ್ ಲಸಿಕೆ ನೀಡಲಾಗುತ್ತಿದೆ.

15-18ರ ವಯೋಮಾನವದರಿಗೆ ಇದುವರೆಗೂ 3.38 ಕೋಟಿ ಡೋಸ್ ಮೊದಲ ಲಸಿಕೆ ನೀಡಲಾಗಿದೆ. ಮುನ್ನೆಚ್ಚರಿಕೆ ಡೋಸ್ ಪ್ರಮಾಣ 43.19 ಲಕ್ಷಕ್ಕೆ ತಲುಪಿದೆ.

## ಬನದ ಹುಣ್ಣಿಮೆ : ಶ್ರೀ ಬನಶಂಕರಿ ದೇವಿ ಜಾತ್ರೆ



ದಾವಣಗೆರೆ, ಜ.16- ಬನದ ಹುಣ್ಣಿಮೆ ಪ್ರಯುಕ್ತ ಇಲ್ಲಿನ ಡಿಸಿಎಂ ಟೌನ್ ಶಿಪ್ ಹಿಂಭಾಗದ ರಾಜೇಂದ್ರ ಬಡಾವಣೆಯಲ್ಲಿನ ಶ್ರೀ ಬನಶಂಕರಿ ದೇವಿಯ 8ನೇ ವರ್ಷದ 3 ದಿನಗಳ ಜಾತ್ರಾ ಮಹೋತ್ಸವ ಕೊರೊನಾ ಮಾರ್ಗಸೂಚಿಯಡಿ ವಿಜೃಂಭಣೆಯಿಂದ ನೆರವೇರುತ್ತಿದೆ.

ಮೊದಲ ದಿನವಾದ ಶನಿವಾರ ನಂದಿ ಧ್ವ ಜಾ ರೋ ಹ ಣ , ಮಹಾಮಂಗಳಾರತಿ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ಎರಡನೇ ದಿನವಾದ ಇಂದು ಗಂಗಾ ಪೂಜೆ, ಶಾಖಾಂಬರಿ ವ್ರತ ಸೇರಿದಂತೆ ಧಾರ್ಮಿಕ ಪೂಜೆ ನಡೆಯಿತು. ಬನಶಂಕರಿ ದೇವಿಗೆ ವಿಶೇಷವಾಗಿ ವಿವಿಧ ತರಕಾರಿಗಳಿಂದ ಅಲಂಕರಿಸಿ ಕಂಗೊಳಿಸುವಂತೆ ಮಾಡಲಾಗಿತ್ತು. ದೇವಸ್ಥಾನದಲ್ಲಿನ ಗಾಯತ್ರಿ ಮತ್ತು ಲಕ್ಷ್ಮಿ ದೇವಿಗೆ ವಿಶೇಷ ಪುಷ್ಪಾಲಂಕಾರ ಮಾಡಲಾಗಿತ್ತು.

ನಾಳೆ ಸೋಮವಾರ ದೇವಿಗೆ ಪಂಚಾಮೃತ ಅಭಿಷೇಕ, ವಿಶೇಷಾಲಂಕಾರ, ಮಹಾಮಂಗಳಾರತಿ ನೆರವೇರಲಿದೆ. ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಯಲಿದೆ.

## ನಗರದಲ್ಲಿ ಇಂದು ಉತ್ಸವಾಂಭ ದೇವಿಯ ಜಾತ್ರೆ



ವಸಂತ ರಸ್ತೆಯ ಹಾಲೇಶ್ವರ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಭ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ, ಶ್ರೀ ಮಹಾಲಕ್ಷ್ಮಿ ದೇವರುಗಳ ಜಾತ್ರಾ ಮಹೋತ್ಸವ ಇಂದು ನಡೆಯಲಿದೆ.

ಇಂದು ಬೆಳಗಿನ ಜಾವ 4.30 ಕ್ಕೆ ತಾಯಿಯವರಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಪುಷ್ಪ ಅಲಂಕಾರ ಪೂಜೆ ಹಾಗೂ 9.30 ರಿಂದ ಸರ್ವ ಭಕ್ತಾದಿಗಳಿಗೆ ಉಡಿ ಅಕ್ಕಿ ಸೇವೆ ಮತ್ತು ಮಧ್ಯಾಹ್ನ 12.30 ಕ್ಕೆ ಪ್ರಸಾದ ವಿನಿಯೋಗ ನಡೆಯುವುದು. ಸಂಜೆ 5.30ಕ್ಕೆ ದೇವಿಯ ಮೆರವಣಿಗೆ ನಡೆಯುವುದು. ಮೆರವಣಿಗೆ ವೇಳೆಯಲ್ಲಿ ಎಲ್ಲಾ ಕನ್ಯೆಯರು, ಮುತ್ತೈದೆಯರು ಕಳಸದೊಂದಿಗೆ ದೇವಿಯನ್ನು ಸ್ವಾಗತಿಸಬೇಕಾಗಿ ಶ್ರೀ ಉತ್ಸವಾಂಭ ದೇವಿ ಭಕ್ತ ಮಂಡಳಿ ತಿಳಿಸಿದೆ.



## ವಿನೋಬನಗರದಲ್ಲಿ ಸಂಭ್ರಮದ ಸಂಕ್ರಾಂತಿ

'ಕಹಿಯಿಂದ ಸಿಹಿ ಬಾಂಧವ್ಯದೆಡೆಗೆ ; ಅಜ್ಞಾನದಿಂದ ಸುಜ್ಞಾನದೆಡೆಗೆ ; ಸೋಲಿನಿಂದ ಗೆಲುವಿನ ಪಥದೆಡೆಗೆ ಸಾಗಲಿ' ಎಂಬ ಸಂದೇಶವನ್ನು ಸಾರುವ ಮಕರ ಸಂಕ್ರಾಂತಿಯನ್ನು ಕೊರೊನಾದ ಕರಿ ನೆರಳಿನ ನಡುವೆಯೂ ದಾವಣಗೆರೆಯಲ್ಲಿ ಕೆಲವು ಕಡೆ ಸಂಭ್ರಮದಿಂದ ಆಚರಿಸಲಾಯಿತು. ವಿನೋಬನಗರ 3ನೇ ಮುಖ್ಯ ರಸ್ತೆ, 2ನೇ 'ಬಿ' ತಿರುವಿನಲ್ಲಿ ಶ್ರೀಮತಿ ಪುಷ್ಪಾ ವಾಲಿ ಅವರ ನಿವಾಸದಲ್ಲಿ ಶನಿವಾರ ಏರ್ಪಾಡಾಗಿದ್ದ ಸಂಕ್ರಾಂತಿ ಹಬ್ಬದ ಸಂಭ್ರಮದಲ್ಲಿ ಮಧು, ಶೀಲಾ, ಶಿಲ್ಪ, ಗಿರಿಜಾ, ಮಕ್ಕಳಾದ ಸದ್ಗುಣ, ಮಾನವಿ, ಸಾಯಿ, ಸಮೃದ್ಧಿ, ಅಫೀಫಾ, ಅಕ್ಷಯ್, ಮನೋಜ್ ಮತ್ತು ಇತರರು ಪಾಲ್ಗೊಂಡಿದ್ದರು.

## ವಿನೋಬನಗರದಲ್ಲಿ ಇಂದು ಬೂಸ್ಟರ್ ಡೋಸ್ ಲಸಿಕೆ



ಮಹಾನಗರ ಪಾಲಿಕೆಯ 16ನೇ ವಾರ್ಡಿನ ವಿನೋಬನಗರ 1ನೇ ಮುಖ್ಯ ರಸ್ತೆ, 1ನೇ ತಿರುವಿನಲ್ಲಿರುವ ಶ್ರೀ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಇಂದು ಬೆಳಿಗ್ಗೆ 10 ಗಂಟೆಯಿಂದ ಕೋವಿಶೀಲ್ಡ್ ಬೂಸ್ಟರ್ ಡೋಸ್ ಉಚಿತ ಲಸಿಕೆ ನೀಡಲಾಗುತ್ತದೆ ಎಂದು ಈ ವಾರ್ಡಿನ ಪಾಲಿಕೆ ಸದಸ್ಯರೂ ಆದ ಪಾಲಿಕೆ ವಿರೋಧ ಪಕ್ಷದ ನಾಯಕ ಎ.ನಾಗರಾಜ್ ತಿಳಿಸಿದ್ದಾರೆ.


ದಾನಿ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ಈ ಲಸಿಕೆ ನೀಡಿದ್ದು, ಫಲಾನುಭವಿಗಳು ಲಸಿಕಾ ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಅವರು ಕೋರಿದ್ದಾರೆ. 60 ವರ್ಷ ಮೇಲ್ಪಟ್ಟ ಅಸ್ವಸ್ಥತೆ ಹೊಂದಿರುವವರಿಗೆ ಅಥವಾ ಈಗಾಗಲೇ 2ನೇ ಡೋಸ್ ಲಸಿಕೆಯನ್ನು ಪಡೆದು 9 ತಿಂಗಳು ಕಳೆದಿರುವಂತಹ ವ್ಯಕ್ತಿಗಳು ಕೋವಿಡ್ - 19 ಮುನ್ನಚ್ಚರಿಕೆ ಲಸಿಕೆ (ಬೂಸ್ಟರ್ ಡೋಸ್) ಯನ್ನು ಈ ಶಿಬಿರದಲ್ಲಿ ನೀಡಲಾಗುತ್ತದೆ.

## ವಾಲ್ಮೀಕಿ ಜಾತ್ರೆ ಮುಂದೂಡಿಕೆಗೆ ಮನವಿ



**(1ನೇ ಪುಟದಿಂದ)** ಆಯುಕ್ತ ವಿಶ್ವನಾಥ್ ಮುದ್ದಜ್ಜಿ, ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ, ತಾಲ್ಲೂಕು ಹಿರಿಯ ಆರೋಗ್ಯ ವಿಸ್ತರಣಾಧಿಕಾರಿ ಎಂ.ಉಮಣ್ಣ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ, ತಾ. ನಾಯಕ ಸಮಾಜದ ಅಧ್ಯಕ್ಷ ಕೆ.ಆರ್.ರಂಗಪ್ಪ, ಮಠದ ಧರ್ಮದರ್ಶಿ ಕೆ.ಬಿ.ಮಂಜುನಾಥ್, ನಗರಸಭೆ ಸದಸ್ಯ ದಿನೇಶ್ ಬಾಬು, ಮಾರುತಿ ಬೇಡರ್, ಗೌರಮ್ಮ ಮಂಜುನಾಥ್, ಮಕರಿ ಪಾಲಾಕ್ಷಪ್ಪ, ಕೊಕ್ಕನೂರಿನ ಡಿ.ಸೋಮಶೇಖರ್, ರಾಜನಹಳ್ಳಿ ಭೀಮಣ್ಣ, ಹರಿಹರದ ರಾಜು, ಕೆ.ಬೇವಿನಹಳ್ಳಿ ಹಾಲೇಶ್, ಹರಪನಹಳ್ಳಿ ತಾಲ್ಲೂಕು ಮುಖಂಡರಾದ ಶ್ರೀಮತಿ ಎಂ.ಪಿ.ಲತಾ ಮಲ್ಲಿಕಾರ್ಜುನ್, ತಾಲ್ಲೂಕು ನಾಯಕ ಸಮಾಜದ ಅಧ್ಯಕ್ಷ ಉಚ್ಚೆಂಗಪ್ಪ, ಪತ್ರಕರ್ತ ಜಿಗಳಿ ಪ್ರಕಾಶ್ ಮತ್ತಿತರರು ಈ ವೇಳೆ ಹಾಜರಿದ್ದರು.

## ಮಹಾತಪಸ್ವಿ ಲಿಂ.ಶ್ರೀ ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳ ಪುಣ್ಯ ಸ್ಮರಣೋತ್ಸವ



ರಂಭಾಪುರಿ ಪೀಠ (ಬಾಳೆಹೊನ್ನೂರು) ಜ.16- ತರೀಕೆರೆ ತಾಲ್ಲೂಕು ಬುಕ್ಕಾಂಬುದಿ ಕ್ಷೇತ್ರದಲ್ಲಿ ಪರಮ ತಪಸ್ವಿ ಲಿಂ. ಶ್ರೀ ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳವರ 85ನೇ ವರ್ಷದ ಪುಣ್ಯ ಸ್ಮರಣೋತ್ಸವ ಸಮಾರಂಭವು ಇದೇ ದಿನಾಂಕ 22ರ ಶನಿವಾರ ಜರುಗಲಿದೆ ಎಂದು ಶ್ರೀಮದುಜ್ಜಯಿನಿ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಪ್ರಕಟಿಸಿದ್ದಾರೆ.

ಇದೇ ದಿನಾಂಕ 22ರ ಪ್ರಾತಃಕಾಲ ಲಿಂ. ಶ್ರೀ ಉಜ್ಜಯನಿ ಸಿದ್ಧಲಿಂಗ ಜಗದ್ಗುರುಗಳವರ ಶಿಲಾ ಮಂಗಲ ಮೂರ್ತಿಗೆ ರುದ್ರಾಭಿಷೇಕ-ಅಷ್ಟೋತ್ತರ ಮತ್ತು ಮಹಾಮಂಗಲ ಜರುಗುವುದು. ನಂತರ ಶ್ರೀ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಪುಣ್ಯ ಸ್ಮರಣೋತ್ಸವ ಸಮಾರಂಭ ಜರುಗಲಿದೆ.

ಇದೇ ದಿನಾಂಕ 17ರ ಸೋಮವಾರದಿಂದ 21ರ ಶುಕ್ರವಾರದವರೆಗೆ 5 ದಿನಗಳ ಕಾಲ ಶ್ರೀ ಉಜ್ಜಯನಿ ಸಿದ್ಧಲಿಂಗ ಜಗದ್ಗುರುಗಳು ಇಷ್ಟಲಿಂಗ ಪೂಜಾ ನೆರವೇರಿಸಲಾಗುವುದು.

## ರಸ್ತೆ ಬದಿಯಲ್ಲಿ ಮೇಲೆದ್ದ ಕಬ್ಬಿಣದ ಸರಳುಗಳು : ಸವಾರರಿಗೆ ಆತಂಕ

ದಾವಣಗೆರೆ, ಜ.16- ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ರಸ್ತೆ ಬದಿಯಲ್ಲಿ ಕಬ್ಬಿಣದ ಸರಳುಗಳು ಮೇಲೆದ್ದು ಅಪಾಯಕ್ಕೆ ದಾರಿ ಮಾಡಿಕೊಟ್ಟಿವೆ ಎಂಬ ಆತಂಕ ಸಾರ್ವಜನಿಕ ವಲಯದಲ್ಲಿ ಮನೆ ಮಾಡಿದೆ.

ವೃತ್ತದ ಬಳಿಯ ಜಯದೇವ ವೃತ್ತ ಸಂಪರ್ಕಿಸುವ ಒಂದು ಭಾಗದ ರಸ್ತೆಯ ಹಂಪ್ಸ್ ನ ಬದಿಯಲ್ಲಿ ರಸ್ತೆ ಅಭಿವೃದ್ಧಿಗೆ ಹಾಕಲಾದ ಕಬ್ಬಿಣದ ಸಲಾಕೆಗಳು ನೆಲದಿಂದ 6 ಇಂಚಿನಷ್ಟು ಮೇಲೆದ್ದಿವೆ. ಇವುಗಳು ಅಪಾಯಕ್ಕೆ ಕಾರಣವಾಗುವ ಸಾಧ್ಯತೆ ಇದೆ ಎಂಬ ಆತಂಕ ವ್ಯಕ್ತವಾಗುತ್ತಿದೆ.

ಇದು ಪ್ರಮುಖ ರಸ್ತೆಯಾಗಿರುವುದರಿಂದ ಇಲ್ಲಿ ಸಾಕಷ್ಟು ವಾಹನಗಳ ಓಡಾಟವಿದೆ. ಮುಖ್ಯವಾಗಿ ಪಾದಚಾರಿಗಳು ಸಹ ಸಾಗಲಿದ್ದು, ಶಾಲಾ ಮಕ್ಕಳೂ ಓಡಾಡುತ್ತಾರೆ. ಹೀಗೆ ರಸ್ತೆಯಲ್ಲಿ ಸಾಗುವಾಗ ಪಾದಚಾರಿಗಳು, ಮಕ್ಕಳ ಕಾಲಿಗೆ ಸಿಲುಕಿ ಎಡವಿ ಬಿದ್ದರೆ ಮೇಲೆದ್ದಿರುವ ಕಬ್ಬಿಣದ ಸಲಾಕೆಗಳು ಚುಚ್ಚಿ ಅನಾಹುತ ಸಂಭವಿಸುವಂತಹ ವಾತಾವರಣವಿದೆ



ಎಂಬ ಅಸಮಾಧಾನವೂ ಕಾಳಜಿಯುಳ್ಳ ನಾಗರಿಕರದ್ದಾಗಿದೆ.

ಈ ಬಗ್ಗೆ ತಕ್ಷಣವೇ ನಗರ ಪಾಲಿಕೆ ಯಾಗಲೀ, ಸಂಬಂಧಪಟ್ಟ ಇಲಾಖೆಯಾಗಲೀ ಗಮನ ಹರಿಸಿ ಮುಂದಾಗಬಹುದಾದ ಅಪಾಯವನ್ನು ತಪ್ಪಿಸಲು ಮುಂದಾಗಬೇಕೆಂಬ ಒತ್ತಾಯ ಕೇಳಿ ಬಂದಿದೆ.

**ಮರದಲ್ಲಿ ಹರಿವ ವಿದ್ಯುತ್:** ಇದೇ ವೃತ್ತದ ರಸ್ತೆ ಬದಿಯಲ್ಲಿನ ಮರವೊಂದಕ್ಕೆ ಹೈಟೆನ್ಷನ್ ವೈರ್ ಅಂಟಿಕೊಂಡಿದ್ದು, ಅಲ್ಲದೇ ಮರದೊಳಗೇ ಬೀದಿ ದೀಪದ ಕಂಬವೂ ಸಹ ಹಾದು ಹೋಗಿದೆ. ಇದರಿಂದ ಮರ ಮತ್ತು ನೆಲದಲ್ಲಿ ವಿದ್ಯುತ್ ಹರಿಯುತ್ತಿದ್ದು, ಗ್ರೌಂಡ್ ಆಗುತ್ತಿದೆ. ಹೀಗೆ ಪಾದಚಾರಿಯೋರ್ವ ಮರವನ್ನು ಮುಟ್ಟಿದಾಗ ಆತನಿಗೆ ಸ್ವಲ್ಪ ಪ್ರಮಾಣದಲ್ಲಿ ವಿದ್ಯುತ್ ಶಾಕ್ ಹೊಡೆದಿದ್ದು, ಆತ ಅದೃಷ್ಟವಶಾತ್ ಪಾರಾಗಿದ್ದಾನೆ. ಈ ಬಗ್ಗೆಯೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಗಮನಹರಿಸಬೇಕೆಂಬ ಮನವಿ ಮಾಡಲಾಗುತ್ತಿದೆ.

## ಅಕ್ಕಿಗೆ ಪ್ರಶಸ್ತಿ ಪ್ರದಾನ



ರಾಣೇಬೆನ್ನೂರು, ಜ.16- ಶನೇಶ್ವರ ಮಠದಲ್ಲಿ ನೀಡ್ಸ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಎಚ್.ಎಫ್.ಅಕ್ಕಿ ಅವರಿಗೆ 'ಸಾಧನ ಸಿರಿ' ಪ್ರಶಸ್ತಿಯನ್ನು ಶ್ರೀ ದಿಂಗಾಲೇಶ್ವರ ಸ್ವಾಮೀಜಿ ನೀಡಿ ಗೌರವಿಸಿದರು. ಜೊತೆಗೆ ಶ್ರೀ ಶಿವಯೋಗಿ ಸ್ವಾಮೀಜಿ ಉಪಸ್ಥಿತರಿದ್ದರು

REQUIRED
Advanced 2 Wheeler BIKE Sales
SALES EXECUTIVES - 2 No's
SALES TEAM LEADER - 1 No.
Asst. SALES MANAGER - 1 No.
Having Minimum 2 years sales experience in selling Two Wheelers. Finance documetation Knowledge completed. PUC/Diploma/Any Degree with Driving License of 2 Wheeler's may apply.
C/O SREE MALLIKARJUNA MOTORS
868/1, P.B. Road, Shankar Vihar Extn.,
Davangere-577 006. Mob.: 9591497776

## ಬನಶಂಕರಿ ದೇವಿಗೆ ತರಕಾರಿ ಅಲಂಕಾರ



ದಾವಣಗೆರೆ, ಜ.16- ನಗರದ ಹಳೆ ಬೇತೂರು ರಸ್ತೆ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಭಾನುವಾರ ಪಲ್ಲೇದ ಹಬ್ಬದ ಅಂಗವಾಗಿ ದೇವಿಗೆ ತರಕಾರಿ ಅಲಂಕಾರ ಮಾಡಲಾಗಿತ್ತು. ಈ ದಿನದ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಸರ್ಕಾರದ ಆದೇಶದಂತೆ ರದ್ದುಗೊಳಿಸಲಾಗಿದೆ.

## ಚರಂಡಿ ಕಾಮಗಾರಿಗೆ ಗುಂಡಿ ಅಗೆತ ಮನೆ ಮೇಲೆ ಉರುಳಿದ ಮರ



ದಾವಣಗೆರೆ, ಜ.16- ಸ್ಮಾರ್ಟ್ ಸಿಟಿಯಡಿ ಚರಂಡಿ ಕಾಮಗಾರಿಗೆಂದು ಗುಂಡಿ ಅಗೆದ ಹಿನ್ನೆಲೆಯಲ್ಲಿ ಬೃಹತ್ ಮರವೊಂದು ಮನೆಯ ಮೇಲೆ ಉರುಳಿ ಬಿದ್ದಿರುವ ಘಟನೆ ನಗರದ ಬಂಬೂಬಜಾರ್‌ನಲ್ಲಿ ಇಂದು ಸಂಜೆ ನಡೆದಿದೆ.

ಚರಂಡಿ ಕಾಮಗಾರಿಗಾಗಿ ಮರಗಳಿದ್ದ ಬಳಿಯೇ ಗುಂಡಿ ಅಗೆದಿದ್ದು, ಈ ವೇಳೆ ಬೃಹತ್ ಮರವೊಂದು ನೆಲದಲ್ಲಿ ಹಿಡಿತ ಸಿಗದೇ ಬೇರು ಸಹಿತ ಬಿಲ್ಡಿಂಗ್ ಮೇಲೆಯೇ ಬಾಗಿ ಬಿದ್ದಿದೆ. ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ ಎಂದು ಹೇಳಲಾಗಿದೆ.

ಕಾಮಗಾರಿ ಕೈಗೊಳ್ಳುವ ಮುನ್ನ ಮರ ಉರುಳಿ ಬೀಳುವ ಸಾಧ್ಯತೆ ಇರುವುದನ್ನು ಗಮನಿಸದೇ ಹೀಗೆ ಅವೈಜ್ಞಾನಿಕ ಕಾಮಗಾರಿ ಕೈಗೊಳ್ಳುವ ಬದಲು ಮುಂಜಾಗ್ರತಾ ದೃಷ್ಟಿಯಿಂದ ಮೊದಲಿಗೆ ಮರಗಳನ್ನು ಕಡಿದು ನಂತರ ಕಾಮಗಾರಿ ಮಾಡಬೇಕಾಗಿತ್ತು. ಅನಾಹುತ ಸಂಭವಿಸದಂತೆ, ಪೂರ್ವ ನಿಯೋಜಿತವಾಗಿ ಕಾಮಗಾರಿ ಕೈಗೊಳ್ಳದೇ ಚರಂಡಿ ನಿರ್ಮಾಣಕ್ಕೆ ಗುಂಡಿ ಅಗೆದು ಮರಗಳು ಉರುಳಿ ಬೀಳುವಂತೆ ಮಾಡುವುದು ಎಷ್ಟು ಸಮಂಜಸ ಎಂಬ ಆಕ್ಷೇಪ ಕೆಲ ಸ್ಥಳೀಯರದ್ದಾಗಿದೆ.

SS & SSM
ಇವರುಗಳ ವತಿಯಿಂದ ದಾವಣಗೆರೆ ನಗರದ ವ್ಯಾಪ್ತಿಯಲ್ಲಿ
ಉಚಿತ ಕೋವಿಶೀಲ್ಡ್ ಬೂಸ್ಟರ್ ಡೋಸ್ ಲಸಿಕೆ ಶಿಬಿರಗಳು
ನಿಮ್ಮ ಆರೋಗ್ಯ ನಮ್ಮ ಗುರಿ
ನಮ್ಮ ನಡೆ ಪ್ರಗತಿಯ ಕಡೆ





60 ವರ್ಷ ಮೇಲ್ಪಟ್ಟ ಅಥವಾ ಈಗಾಗಲೇ 2ನೇ ಡೋಸ್ ಕೋವಿಶೀಲ್ಡ್ ಲಸಿಕೆ ಪಡೆದು
9 ತಿಂಗಳು (39 ವಾರಗಳು) ಕಳೆದಿರುವಂತಹ ವ್ಯಕ್ತಿಗಳಿಗೆ ಮುನ್ನೆಚ್ಚರಿಕೆ ಕೋವಿಶೀಲ್ಡ್ ಬೂಸ್ಟರ್ ಡೋಸ್ ನೀಡಲಾಗುವುದು
ದಿನಾಂಕ : 17-01-2022ನೇ ಸೋಮವಾರ

| ಕ್ರ.ಸಂ. | ಲಸಿಕೆ ಕೇಂದ್ರಗಳು | ವಾರ್ಡ್‌ಸಂಖ್ಯೆ |
|---|---|---|
| 1. | ವಿದ್ಯಾನಗರ – ಶಿವ ಪಾರ್ವತಿ ಕಲ್ಯಾಣ ಮಂಟಪ | 39 |
| 2. | ವಿನೋಬನಗರ – 1ನೇ ಮೇನ್, 1ನೇ ಕ್ರಾಸ್, ಮುರುಘರಾಜೇಂದ್ರ ಪ್ರೌಢಶಾಲೆ. | 16 |
| 3. | ಲೆನಿನ್ ನಗರ, ನಿಟ್ಟುವಳ್ಳಿ – ಮಹಾನಗರಪಾಲಿಕೆ ಸದಸ್ಯರ ಜನಸಂಪರ್ಕ ಕಛೇರಿ, 60 ಅಡಿ ರಸ್ತೆ. | 36 |
| 4. | ಕುರುಬರ ಕೇರಿ – ಶ್ರೀ ದುರ್ಗಾಂಬಿಕಾ ದೇವಸ್ಥಾನದ ಪ್ರಸಾದ ನಿಲಯ, ಶಿವಾಜಿ ವೃತ್ತ. | 6 |

ಅಮೂಲ್ಯ ಜೀವ ಉಳಿಸಲು ಲಸಿಕೆ ಪಡೆಯೋಣ, ಎಲ್ಲರನ್ನು ಕೋವಿಡ್ ಬೂಸ್ಟರ್ ಡೋಸ್ ಲಸಿಕೆ ಪಡೆಯುವಂತೆ ಪ್ರೇರೇಪಿಸೋಣ
ಈ ಲಸಿಕೆ ಶಿಬಿರಗಳಲ್ಲಿ ನಿಮ್ಮೊಂದಿಗೆ ನಾವಿದ್ದೇವೆ

**JANATHAVANI** - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte